# ವಿತ್ತೀಯ ಕಾರ್ಯ ನೀತಿ ಸಂಸ್ಥೆ

**ವಾರ್ಷಿಕ ವರದಿ– 2015–16 (01–04–2015 ರಿಂದ 31–03–2016 ರವರೆಗೆ)**

ಪರಿವಿಡಿ


ಅಧ್ಯಾಯ–1 ........ 3

**1. ಪೀಠಿಕೆ** ........ 3

**1.1 ದೃಷ್ಟಿ** ........ 3

**1.2 ಗುರಿ** ........ 3

**1.3 ಧ್ಯೇಯಗಳು** ........ 3

**1.4 ವಿಕಾಸನ ಕೇಂದ್ರಗಳು:** ........ 4

**1.5 ಚಟುವಟಿಕೆಗಳ ವ್ಯಾಪ್ತಿ** ........ 4

**1.6 ಆಡಳಿತ ಪರಿಷತ್ತು** ........ 5

**1.7 ವಿತ್ತೀಯ ಕಾರ್ಯನೀತಿ ಸಂಸ್ಥೆಯ ಮೂಲಸೌಕರ್ಯ:** ........ 5

**1.8 ಮಾಹಿತಿ ತಂತ್ರಜ್ಞಾನ ಮೂಲ ಸೌಕರ್ಯ:** ........ 5

**1.9 ಖರೀದಿಗಳು ಹಾಗೂ ವಾರ್ಷಿಕ ನಿರ್ವಹಣೆ ಒಪ್ಪಂದಗಳು:** ........ 6

**1.10 ಗ್ರಂಥಾಲಯ:** ........ 7

ಅಧ್ಯಾಯ – 2 ........ 8

**2. ಬೌದ್ಧಿಕ ಕಾರ್ಯಗಳು** ........ 8

**2.1 2015–16 ನೇ ಸಾಲಿನಲ್ಲಿ ವಿತ್ತೀಯ ಕಾರ್ಯ ನೀತಿ ಸಂಸ್ಥೆಯು ನಡೆಸಿದ ತರಬೇತಿಗಳು.** ........ 8

**2.2 ತರಬೇತಿ ಮಾಡ್ಯೂಲ್‌ಗಳ ರಚನೆ:** ........ 8

**2.3 2014 (ii) ತಂಡದ ಪರೀಕ್ಷತಾ ಐಇಎಸ್ ಅಧಿಕಾರಿಗಳಿಗೆ ತರಬೇತಿ:** ........ 10

**2.4 ವಿತ್ತೀಯ ಕಾರ್ಯನೀತಿ ಸಂಸ್ಥೆಯಲ್ಲಿ ವೃತ್ತಿ ಬುನಾದಿ ತರಬೇತಿ:** ........ 10

**2.5 ಸಂಶೋಧನೆ ಮತ್ತು ಇತರೆ ಚಟುವಟಿಕೆಗಳು:** ........ 10

**2.6 ಸಮಾಲೋಚನೆ:** ........ 12

**2.7 ಪ್ರಗತಿಯಲ್ಲಿರುವ ಸಂಶೋಧನೆ:** ........ 12

**2.8 ಇತರೆ:** ........ 12

**2.9 ಹಣಕಾಸು:** ........ 13

**2.10 ವೆಚ್ಚ:** ........ 13

ಅಧ್ಯಾಯ– 3 ........ 14

ಅಧ್ಯಾಯ–4 ........ 15

4.1 ಮೊದಲ ಭಾಗ : ಇಲ್ಲ ........ 15

4.2 ದ್ವಿತೀಯ ಭಾಗ : ಇಲ್ಲ ........ 15

**4.3 ತೃತೀಯ ಭಾಗ: ಇಲ್ಲ** ........ 15

**4.4 ನಾಲ್ಕನೇ ಭಾಗ:** ........ 15

ಅಧ್ಯಾಯ–5 ........ 16

**5 ಆಡಳಿತಾತ್ಮಕ ಚಟುವಟಿಕೆಗಳು ಮತ್ತು ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿನ ಸಾಧನೆಗಳು** ........ 16

**5.1.** ಮಾನವ ಸಂಪನ್ಮೂಲ. ........ 16

**5.2 ಖಾಲಿ ಹುದ್ದೆಗಳು ಮತ್ತು ನಿವೃತ್ತಿಗಳು:** ........ 17

**5.3 ಹೊರಗುತ್ತಿಗೆ ಸಿಬ್ಬಂದಿ:** ........ 17

**5.4 ತರಬೇತಿ ಹಾಗೂ ವಿಕಾಸಂ ಪ್ರತಿನಿಧಿಸುವಿಕೆ:** ........ 18

**5.5 ಹೆಚ್ಚಿನ ವಿದ್ಯಾರ್ಹತೆ ಪಡೆದಿರುವ ಬಗ್ಗೆ:** ........ 19

**5.6 ತಂತ್ರಾಂಶ:** ........ 19

ಅಧ್ಯಾಯ–6 ........

**6.1 ವಿಧಾನ ಸಭೆ/ ವಿಧಾನ ಪರಿಷತ್ತು ಪ್ರಶ್ನೆಗಳು:** ........

**6.2 ಮೊಕದ್ದಮೆಗಳು:** ........

**6.3 ಲೆಕ್ಕ ಪರಿಶೋಧನೆ:** ........

## ಅಧ್ಯಾಯ–1

### 1. ಪೀಠಿಕೆ

ವಿತ್ತೀಯ ಕಾರ್ಯನೀತಿ ಸಂಸ್ಥೆಯು ಸರ್ಕಾರದಿಂದು 2007ರಲ್ಲಿ ಸ್ಥಾಪಿಸಲ್ಪಟ್ಟಿದೆ. ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ –2002 (ಕ.ವಿ.ಹೊ.ಅ.) ಅಕ್ಷರಶಃ ಅನುಷ್ಠಾನಗೊಳಿಸುವ ಪ್ರಕ್ರಿಯೆಯನ್ನು ಸಾಂಸ್ಥೀಕರಣಗೊಳಿಸುವ ನಿಟ್ಟಿನಲ್ಲಿ ವಿತ್ತೀಯ ಕಾರ್ಯನೀತಿ ಸಂಸ್ಥೆಯ ಸ್ಥಾಪನೆಯು ಸರ್ಕಾರ ಹೊಂದಿರುವ ಬದ್ಧತೆಯ ಮನೋಭಾವವನ್ನು ಎತ್ತಿ ತೋರಿಸುತ್ತದೆ. ತನ್ಮೂಲಕ ಈ ಮುಂದಿನ ಕಾರ್ಯಗಳಲ್ಲಿ ಕರ್ನಾಟಕ ಸರ್ಕಾರಕ್ಕೆ ನೆರವಾಗುವುದಕ್ಕಾಗಿ ವಿತ್ತೀಯ ಕಾರ್ಯನೀತಿ ಸಂಸ್ಥೆಯನ್ನು ಸ್ಥಾಪಿಸಲಾಗಿರುತ್ತದೆ, ಅವುಗಳೆಂದರೆ;

- ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ "ತಿಳಿವಳಿಕೆಯುಳ್ಳ" ನಿರ್ಣಯ ಕೈಗೊಳ್ಳುವಿಕೆಯನ್ನು ವೃದ್ಧಿಸಲು;
- ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸಮಂಜಸ ಮತ್ತು ಪಾರದರ್ಶಕ ತತ್ವಗಳನ್ನು ಅನುಸರಿಸುವ ಮೂಲಕ ಆರ್ಥಿಕ ಆಡಳಿತದಲ್ಲಿ ಹೆಚ್ಚಿನ ಹೊಣೆಗಾರಿಕೆ ಮತ್ತು ಪಾರದರ್ಶಕತೆ ಮೂಡಿಸುವಂಥ ಮಾರ್ಗದರ್ಶಕಗಳನ್ನು ಖಚಿತಪಡಿಸಿಕೊಳ್ಳುವುದು;
- ಸಂಬಂಧಪಟ್ಟ ಸಂಸ್ಥೆಗಳ ಸಾಮರ್ಥ್ಯವನ್ನು ನಿರಂತರವಾಗಿ ಮೇಲ್ದರ್ಜೆಗೇರಿಸುವ ಮೂಲಕ ವಿತ್ತೀಯ ತಿದ್ದುಪಡಿ ಕ್ರಮವನ್ನು ಸುಸ್ಥಿರಗೊಳಿಸುವುದು.

### 1.1 ದೃಷ್ಟಿ

ಸಾರ್ವಜನಿಕ ಹಣಕಾಸು ನಿರ್ವಹಣೆಯಲ್ಲಿ ತೊಡಗಿರುವ ಮಾನವ ಬಂಡವಾಳದ ಗುಣಮಟ್ಟವನ್ನು ಹೆಚ್ಚಿಸುವುದು ಮತ್ತು ಇದರ ಪ್ರತಿಫಲವಾಗಿ, ಅವರ ದಕ್ಷತೆ ಹೆಚ್ಚಿಸುವ ಮೂಲಕ ವಿವೇಕಯುತ ವಿತ್ತೀಯ ನಿಬಂಧನೆಗಳಿಗೆ ಬದ್ಧರಾಗುವ ಮತ್ತು ನಾಗರೀಕರ ಹಣದ ಮೌಲ್ಯವನ್ನು ಖಚಿತಪಡಿಸುವ ಸ್ವಭಾವವನ್ನು ವೃದ್ಧಿಸುವುದು ವಿತ್ತೀಯ ಕಾರ್ಯನೀತಿ ಸಂಸ್ಥೆಯ ದೃಷ್ಟಿಕೋನವಾಗಿರುತ್ತದೆ.

### 1.2 ಗುರಿ

ವಿತ್ತೀಯ ಹೊಣೆಗಾರಿಕೆಯ ಪ್ರಜ್ಞೆಯನ್ನು ಮೂಡಿಸುವ ಮೂಲಕ, ಹೊಂದಿಕೆಯಾಗುವ ಕಾರ್ಯಪದ್ಧತಿಗಳನ್ನು ವ್ಯಾಪಕವಾಗಿ ಅಳವಡಿಸಿ ಸರ್ಕಾರದ ಒಳಗಿರುವ ಮತ್ತು ಹೊರಗಿರುವ ಬಳಕೆದಾರರಿಗೆ ನ್ಯಾಯಸಮ್ಮತ ಮತ್ತು ಕೈಗೆಟಕುವ ವೆಚ್ಚದಲ್ಲಿ ತನ್ನ ಸೇವೆಗಳನ್ನು ಒದಗಿಸುವುದು ಹಾಗೂ ಈ ಮೂಲಕ ಎಲ್ಲಾ ಸರ್ಕಾರಿ ವಲಯದ ಆಡಳಿತ ಘಟಕಗಳಿಗೆ ಸಂಬಂಧಿಸಿದ ಸಮಾಲೋಚನಾ ಮತ್ತು ನಿರ್ವಹಣಾ ವಿಷಯಗಳಿಗೆ ಸಂಬಂಧಿಸಿದಂತೆ 'ಉಲ್ಲೇಖಿಸುವ ಪ್ರಥಮ ಸಂಸ್ಥೆಯಾಗುವಂತೆ ತನ್ನನ್ನು ಸ್ಥಾಪಿಸಿಕೊಳ್ಳುವುದು' ವಿತ್ತೀಯ ಕಾರ್ಯನೀತಿ ಸಂಸ್ಥೆಯ ಗುರಿಯಾಗಿದೆ.

### 1.3 ಧ್ಯೇಯಗಳು

ವಿತ್ತೀಯ ಕಾರ್ಯನೀತಿ ಸಂಸ್ಥೆಯನ್ನು ಈ ಮುಂದಿನ ಧ್ಯೇಯಗಳೊಂದಿಗೆ ಸ್ಥಾಪಿಸಲಾಯಿತು;

(ಅ) ವಿತ್ತೀಯ ವಿವೇಚನೆ ಮೇಲೆ ಕೇಂದ್ರೀಕರಿಸಿದ ಸಂಬಂಧಿತ ಸಂಶೋಧನಾ ಫಲಿತಾಂಶಗಳ ಮೂಲಕ ಹಣಕಾಸು ಯೋಜನೆ, ಕಾರ್ಯಕ್ರಮ ಅನುಷ್ಠಾನ, ಸಾರ್ವಜನಿಕ ವೆಚ್ಚ ಮತ್ತು ಆಸ್ತಿ ನಿರ್ವಹಣೆ ಯಂತಹ ವಿವಿಧ ವಿಷಯಗಳ ಬಗ್ಗೆ ಸರ್ಕಾರಿ ಮತ್ತು ಸಾರ್ವಜನಿಕ ವಲಯದ ಅಧಿಕಾರಿಗಳಿಗೆ ಅಗತ್ಯಕ್ಕೆ ತಕ್ಕಂತೆ ತರಬೇತಿಯನ್ನು ನೀಡುವುದು

(ಆ) ಸರ್ಕಾರಿ ಮತ್ತು ಸಾರ್ವಜನಿಕ ವಲಯ ಅಸ್ತಿತ್ವ ಹೊಂದಿರುವ ಸಂಸ್ಥೆಗಳಿಗೆ ಸಂಬಂಧಿಸಿದ ತಕ್ಷಣದ ಮತ್ತು ದೀರ್ಘಾವಧಿಯ ವಿಶೇಷ ಸಂಶೋಧನೆ ಮತ್ತು ಅಧ್ಯಯನಗಳನ್ನು ಬೇಡಿಕೆ ಮತ್ತು ಸ್ವಪ್ರೇರಣೆಯಿಂದ ಕೈಗೊಳ್ಳುವುದು.

(ಇ) ಕಾರ್ಯನೀತಿ ವಿಶ್ಲೇಷಣೆ, ಬಂಡವಾಳ ನಿರ್ವಹಣೆ, ಸಂಭವನೀಯ ವಿಪತ್ತು ನಿರ್ವಹಣೆ ಮತ್ತು ಕಾರ್ಯನಿರ್ವಹಣಾ ಮೇಲ್ವಿಚಾರಣಾ ಪದ್ಧತಿಗಳಿಗೆ ಸಂಬಂಧಿಸಿದ ಪರಾಮರ್ಶನ ಕೈಪಿಡಿಗಳು, ಪೂರ್ವ ನಿರ್ಧರಿತ ನಮೂನೆಗಳು,

ಸಾಧನಗಳು ಮತ್ತು ಮಾನಕಗಳು ಸುಲಭವಾಗಿ ದೊರೆಯುವಂತೆ ಸಿದ್ಧಪಡಿಸುವುದು ಮತ್ತು ಅವುಗಳನ್ನು ಸಾಂಸ್ಥೀಕರಿಸುವುದು.

(ಈ) ಸರ್ಕಾರಿ ಕಾರ್ಯಾಚರಣೆಗಳಲ್ಲಿನ ಉತ್ತಮ ಆರ್ಥಿಕ ನಿರ್ವಹಣೆಗೆ ಸಂಬಂಧಿಸಿದ ಇನ್ನೂ ಉತ್ತಮ ಕಾರ್ಯಪದ್ಧತಿಗಳನ್ನು ಕಂಡುಹಿಡಿಯುವುದು, ದಾಖಲೀಕರಿಸುವುದು ಮತ್ತು ಪ್ರಸಾರ ಮಾಡುವುದು ಹಾಗೂ ವೆಚ್ಚ ಮಾಡಿದ ಹಣಕ್ಕೆ ಮೌಲ್ಯವನ್ನು ಖಾತರಿಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಇಲಾಖೆಗಳು, ಸಾರ್ವಜನಿಕ ವಲಯ ಉದ್ಯಮಗಳು ಮತ್ತು ಎಲ್ಲಾ ಸರ್ಕಾರಿ ಸಂಸ್ಥೆಗಳಿಗೆ ನೆರವು ನೀಡುವುದು.

(ಉ) ನಿರಂತರವಾಗಿ ತರಬೇತಿ ಮತ್ತು ಸಂಶೋಧನೆಗಳು ನಡೆಯುವಂತೆ ಅನುಕೂಲ ಕಲ್ಪಿಸುವುದಕ್ಕಾಗಿ ಪರಿಣಾಮಕಾರಿಯಾಗಿರುವ ಅಗತ್ಯ ಭೌತಿಕ ಮೂಲಸೌಕರ್ಯ ಮತ್ತು ನಿರ್ವಹಣಾ ಸಂಪನ್ಮೂಲಗಳನ್ನು ಒದಗಿಸುವುದು ಮತ್ತು ನಿರ್ವಹಿಸುವುದು.

**1.4 ವಿಕಾಸಂನ ಕೇಂದ್ರಗಳು:**

ಸಾಂಪ್ರದಾಯಕ ತರಬೇತಿ ಅಥವಾ ಸಂಶೋಧನಾ ಸಂಸ್ಥೆಗಳಿಗಿಂತ ಭಿನ್ನವಾಗಿ, ಸಾರ್ವಜನಿಕ ಸಂಪನ್ಮೂಲದ ಬಳಕೆಗೆ ಸಂಬಂಧಿಸಿದ ವಿನ್ಯಾಸ, ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವೂ ಸೇರಿದಂತೆ ಸಮಸ್ಯೆಗಳಿಗೆ ಸಮಗ್ರ ಪರಿಹಾರಗಳನ್ನು ಒದಗಿಸುವುದು, ವಿತ್ತೀಯ ಕಾರ್ಯನೀತಿ ಸಂಸ್ಥೆಯ ನೈಜ ಉದ್ದೇಶವಾಗಿದೆ. ಸಂಸ್ಥೆಯು ಹಣಕಾಸು ಇಲಾಖೆಯ ಆಡಳಿತ ನಿಯಂತ್ರಣದ ಅಡಿಯಲ್ಲಿ ಒಂದು ನಿರ್ದೇಶನಾಲಯದಂತೆ ಕಾರ್ಯನಿರ್ವಹಿಸುತ್ತಿದೆ. ಒಂದು ತರಬೇತಿ ಉದ್ಯಮವಾಗಿ ವಿತ್ತೀಯ ಕಾರ್ಯನೀತಿಯ ಚಟುವಟಿಕೆಗಳನ್ನು ಐದು ಕೇಂದ್ರಗಳ ಮೂಲಕ ನಿರ್ವಹಿಸಲಾಗುತ್ತಿದೆ:

(ಅ) ಸಾರ್ವಜನಿಕ ಸಂಪನ್ಮೂಲ ನಿರ್ವಹಣೆ
(ಆ) ಸಾರ್ವಜನಿಕ ವೆಚ್ಚ ನಿರ್ವಹಣೆ
(ಇ) ಹಣಕಾಸು ಉತ್ತರದಾಯಿತ್ವ ಮತ್ತು ವಿಕೇಂದ್ರೀಕರಣ
(ಈ) ಯೋಜನೆ, ಮಾಹಿತಿ ತಂತ್ರಜ್ಞಾನ ಮತ್ತು ಸಾಂಖ್ಯಿಕ ಕೇಂದ್ರ ಮತ್ತು
(ಉ) ಯೋಜನಾ ನಿರ್ವಹಣೆ.

**1.5 ಚಟುವಟಿಕೆಗಳ ವ್ಯಾಪ್ತಿ**

ವಿತ್ತೀಯ ಕಾರ್ಯನೀತಿ ಸಂಸ್ಥೆಯ ಚಟುವಟಿಕೆಗಳು ಮತ್ತು ಸೇವೆಗಳು, ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ, 2002ರ 4ನೇ ಪ್ರಕರಣದ ಉಪಬಂಧಗಳ ಮೇರೆಗಿನ ವಿತ್ತೀಯ ನಿರ್ವಹಣೆಯ ಹದಿನೇಳು ತತ್ವಗಳ ಆಶಯವನ್ನು ಅಳವಡಿಸಿಕೊಳ್ಳುವುದನ್ನು ಅಪೇಕ್ಷಿಸಲಾಗಿದೆ. ಇವುಗಳನ್ನು ಕೆಳಕಾಣಿಸಿದ ನಾಲ್ಕಡಿ ವಿಧಾನಗಳ ಮೂಲಕ ಸಾಧಿಸಲಾಗುವುದು.

(ಅ) ಅಗತ್ಯಕ್ಕೆ ತಕ್ಕಂತೆ ತರಬೇತಿ ಮತ್ತು ಹಾಗೆ ತರಬೇತಿ ಪಡೆದುಕೊಂಡವರಿಗೆ ನಿರಂತರವಾಗಿ ನೆರವು ನೀಡುವುದು.

(ಆ) ಸಾಂಪ್ರದಾಯಕ ಕ್ಷೇತ್ರಗಳು ಮತ್ತು ಸಾರ್ವಜನಿಕ ಖಾಸಗಿ ಸಹಭಾಗಿತ್ವಗಳು (PPPs) ಸರಕು ಮತ್ತು ಸೇವಾ ತೆರಿಗೆಗಳು (GST), ಪರಿಸರ ಅರ್ಥಶಾಸ್ತ್ರ, ಆರೋಗ್ಯ ಅರ್ಥಶಾಸ್ತ್ರ ಮೊದಲಾದ ನೂತನ ಮತ್ತು ಸವಾಲಿನ ಕ್ಷೇತ್ರಗಳಿಗೆ ಸಮಾಲೋಚನಾ ಸೇವೆ ಮತ್ತು ತರಬೇತಿಯನ್ನು ನೀಡುವುದು.

(ಇ) ದತ್ತಾಂಶ ಬ್ಯಾಂಕನ್ನು ಸೃಜಿಸುವುದು ಮತ್ತು ನಿರ್ವಹಿಸುವುದಕ್ಕೆ ಸಂಬಂಧಿಸಿದಂತೆ ಇಲಾಖೆಗಳಿಗೆ ನೆರವು ನೀಡುವುದೂ ಸೇರಿದಂತೆ ದತ್ತಾಂಶ ಕೋಶದ ನಿರ್ವಹಣೆ ಮಾಡುವುದು, ಮತ್ತು

(ಈ) ವಿತ್ತೀಯ ನಿರ್ವಹಣೆ ತತ್ವಗಳು ಮತ್ತು ಹೊಣೆಗಾರಿಕೆಗೆ ಸಂಬಂಧಿಸಿದ ಸಲಹೆ ಮತ್ತು ನೆರವು ನೀಡುವುದು.

**1.6 ಆಡಳಿತ ಪರಿಷತ್ತು**

ಸಂಸ್ಥೆಯ ಪ್ರಕಾರ್ಯದ ಮೇಲ್ವಿಚಾರಣೆ ಮಾಡುವುದು ಮತ್ತು ನಿರ್ದೇಶಕರಿಗೆ ಮಾರ್ಗದರ್ಶನ ನೀಡುವುದಕ್ಕಾಗಿ ಪ್ರಧಾನ ಕಾರ್ಯದರ್ಶಿ, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಆಡಳಿತ ಪರಿಷತ್ತನ್ನು ರಚಿಸಲಾಗಿದೆ.

1. ಡಾ. ಕೆ.ಪಿ.ಕೃಷ್ಣನ್, ಅಪರ ಕಾರ್ಯದರ್ಶಿಗಳು, ಭೂ ಸಂಪನ್ಮೂಲಗಳ ಇಲಾಖೆ, ಭಾರತ ಸರ್ಕಾರ,
2. ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
3. ಪ್ರಧಾನ ಕಾರ್ಯದರ್ಶಿ, ಯೋಜನೆ,
4. ಪ್ರಧಾನ ಕಾರ್ಯದರ್ಶಿ, ಕಂದಾಯ,
5. ಕಾರ್ಯದರ್ಶಿ, ಹಣಕಾಸು (ಆಯವ್ಯಯ ಮತ್ತು ಸಂಪನ್ಮೂಲಗಳು),
6. ಆಯುಕ್ತರು, ವಾಣಿಜ್ಯ ತೆರಿಗೆಗಳು,
7. ಆಯುಕ್ತರು, ಅಬಕಾರಿ
8. ಪ್ರಧಾನ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ ಇವರು ಆಡಳಿತ ಪರಿಷತ್ತಿನ ಇತರ ಸದಸ್ಯರಾಗಿರುತ್ತಾರೆ.

ವಿತ್ತೀಯ ಕಾರ್ಯನೀತಿ ಸಂಸ್ಥೆಯ ಆಡಳಿತ ಪರಿಷತ್ತಿನ 11 ನೇ ಸಭೆಯನ್ನು ದಿನಾಂಕ 10/09/2015 ರಂದು ನಡೆಸಲಾಗಿತ್ತು. ಈ ಸಭೆಯಲ್ಲಿ ತರಬೇತಿಗಳನ್ನು ನಡೆಸಿರುವ ಕುರಿತು, ಅನುದಾನ, ವೆಚ್ಚಗಳಿಗೆ, ಅಲ್ಪ ಅವಧಿಯ ಸಮಾಲೋಚಕರ ನೇಮಕಾತಿ ಮಾಡಿಕೊಳ್ಳಲು, ಸಂಸ್ಥೆಗೆ ಮಾಡಲಾದ ಖರೀದಿಗಳು ಹಾಗೂ ಮೂಲ ಸೌಕರ್ಯಗಳ ಬದಲಾವಣೆಗಳಿಗೆ ಅನುಮೋದನೆ ಪಡೆಯಲಾಯಿತು.

**1.7 ವಿತ್ತೀಯ ಕಾರ್ಯನೀತಿ ಸಂಸ್ಥೆಯ ಮೂಲಸೌಕರ್ಯ:**

ವಿತ್ತಿಯ ಕಾರ್ಯನೀತಿ ಸಂಸ್ಥೆಯು ಆಡಳಿತ ವಿಭಾಗ ಅತಿಥಿ ಗೃಹ, ವಸತಿ ನಿಲಯ, ನಿರ್ದೇಶಕರ ವಸತಿ ಗೃಹ, ಬೋಧಕರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ವಸತಿ ಗೃಹಗಳನ್ನು ಹೊಂದಿದೆ.

ಕಟ್ಟಡಗಳ ನವೀಕರಣ /ಸೇರ್ಪಡೆಗಳಿಗೆ ಸಂಬಂಧಿಸಿದಂತೆ ಕೆಳಕಾಣಿಸಿದ ಸಿವಿಲ್ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ:

1. ಅಧಿಕಾರಿಗಳ ಕೊಠಡಿಗಳು
2. ಫೆಸಿಲಿಟಿ ಸೆಂಟರ್
3. ಕಿಟಕಿಗಳಿಗೆ ಪಾರಿವಾಳ ಬಲೆ
4. ಕ್ವಾರ್ಟರ್ಸ್‌ಗಳಿಗೆ ಗ್ರಿಲ್ ಅಳವಡಿಕೆ.

ಹಾಗೂ ಕೆಳಕಾಣಿಸಿದ ಕಾಮಗಾರಿಗಳನ್ನು ಭಾಗಶ: ಪೂರ್ಣಗೊಳಿಸಿದೆ:

1. ವ್ಯಾಯಾಮ ಕೊಠಡಿ
2. ಪಾಲಿ ಕಾರ್ಬೋನೇಟ್ ರೂಫ್ ಟಾಪ್.

ಸಂಸ್ಥೆಯ ಅಂತರ್ಜಾಲ ತಾಣವನ್ನು ಪ್ರಾರಂಭಿಸಲಾಗಿದ್ದು ಅದನ್ನು www.fpibangalore.gov.in ನಲ್ಲಿ ನೋಡಬಹುದಾಗಿದೆ.

**1.8 ಮಾಹಿತಿ ತಂತ್ರಜ್ಞಾನ ಮೂಲ ಸೌಕರ್ಯ:**

1. ಪ್ರಶಿಕ್ಷಣಾರ್ಥಿಗಳಿಗೆ ಮಾಹಿತಿ ತಂತ್ರಜ್ಞಾನ ಪ್ರಾಯೋಗಿಕ ಶಿಕ್ಷಣ ನೀಡುವ ಸಲುವಾಗಿ ಆಡಳಿತ ವಿಭಾಗದ 2ನೇ ಅಂತಸ್ತಿನಲ್ಲಿ 2 ಸರ್ವರ್‌ಗಳನ್ನು ಅನುಸ್ಥಾಪಿಸಿದೆ.
2. ಮಂಥನ 3 ಮತ್ತು 7 ತರಬೇತಿ ಕೊಠಡಿಗಳನ್ನು ಕಂಪ್ಯೂಟರ್ ಲ್ಯಾಬ್‌ಗಳನ್ನಾಗಿ ಪರಿವರ್ತಿಸಿ ಪ್ರತಿ ಕೊಠಡಿಯಲ್ಲಿ 30 ಥಿನ್ ಕ್ಲೈಂಟ್ಸ್ ಗಳನ್ನು ಅಳವಡಿಸಿದೆ.

3. ಹಾಸ್ಟೆಲ್ ಬ್ಲಾಕ್‌ನಲ್ಲಿ ಪ್ರಶಿಕ್ಷಣಾರ್ಥಿಗಳ ಉಪಯೋಗಕ್ಕಾಗಿ ಅಂತರ್ಜಾಲ ವ್ಯವಸ್ಥೆ ಹೊಂದಿರುವ 4 ಕಂಪ್ಯೂಟರ್‌ಗಳೊಂದಿಗೆ ಫೆಸಿಲಿಟಿ ಸೆಂಟರ್ ಪ್ರಾರಂಭಿಸಿದೆ. ಈ ಕೇಂದ್ರಕ್ಕೆ ಇನ್ನು ಮುಂದೆ ಜೆರಾಕ್ಸ್ ಹಾಗೂ ಇನ್ನಿತರ ಯಂತ್ರೋಪಕರಣಗಳನ್ನು ಖರೀದಿಸಿ ಸಜ್ಜುಗೊಳಿಸಲು ಯೋಜಿಸಿದೆ.

ವಿಕಾಸಂ ನ ಅಂತರ್ಜಾಲ ಜಾಲ ತಾಣ www.fpibangalore.gov.in ಅನ್ನು ಆಗಿಂದಾಗ್ಗೆ ಕೆಳಕಾಣಿಸಿದ ಮಾಹಿತಿಗಳನ್ನು ಅಳವಡಿಸಿ ಅಪ್‌ಡೇಟ್ ಮಾಡಲಾಗಿದೆ.

ಅ. 2013–14, 2014–15 ಹಾಗೂ 2015–16 ನೇ ಸಾಲಿನಲ್ಲಿ ನಡೆದ ತರಬೇತಿ ಕಾರ್ಯಕ್ರಮಗಳು

ಬ. 2015–16 ನೇ ಸಾಲಿನ ತರಬೇತಿ ಕ್ಯಾಲೆಂಡರ್

ಕ. 2015–16 ನೇ ಸಾಲಿನಲ್ಲಿ ಹೊರತಂದ ಆಡಳಿತ, ವಾರ್ಷಿಕ ಹಾಗೂ ತಾಂತ್ರಿಕ ವರದಿಗಳು

ಡ. ಟೆಂಡರ್‌ಗೆ ಸಂಬಂಧಿಸಿದ ಮಾಹಿತಿ

ಇ. ಪ್ರತಿ ಮಾಹೆಯಲ್ಲಿ ಹಮ್ಮಿಕೊಂಡಿರುವ ತರಬೇತಿ ಕಾರ್ಯಕ್ರಮಗಳು, ಸುದ್ದಿಗಳು ಹಾಗೂ ಇತರೆ ಕಾರ್ಯಕ್ರಮಗಳನ್ನು ಅಪ್‌ಲೋಡ್ ಮಾಡಲಾಗುತ್ತಿದೆ.

ಈ. ಆಯಾ ವರ್ಷದ ತರಬೇತಿಯ ಕಾರ್ಯಕ್ರಮಗಳ ಫೋಟೋಗಳನ್ನು ಫೋಟೋ ಗ್ಯಾಲರಿಯ ಲಿಂಕ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತಿದೆ.

### 1.9 ಖರೀದಿಗಳು ಹಾಗೂ ವಾರ್ಷಿಕ ನಿರ್ವಹಣೆ ಒಪ್ಪಂದಗಳು:

ವರದಿಯ ಸಾಲಿನಲ್ಲಿ ಕೆಳಕಾಣಿಸಿದ ವಸ್ತುಗಳನ್ನು ಖರೀದಿಸಲಾಗಿದೆ.

| | **Particulars** | **Commencing Date** | **Amount** |
|---|---|---|---|
| | **Procurements** | | |
| 1 | Painting & Portraits for Guest House | Jun-15 | 29787.00 |
| 2 | Flip chart Magnetic white board with stand | Jun-15 | 8061.00 |
| 3 | HP make hi-end IT Servers with software (2 No.) | Nov-15 | 1818610.00 |
| 4 | 5 KVA online UPS with 120 minutes backup | Dec-15 | 139598.00 |
| 5 | Unified Threat Management ( UTM)devices with software - WO issued | Feb-16 | 971710.00 |
| 6 | RDP make Thin Client devices with assceories (60 No.) | Mar-16 | 2006926.00 |
| 7 | Steel Furniture for Office & Hostel | Mar-16 | 96753.00 |
| 8 | 22"LED TVs with Set Top Box for hostel (70 No.) | Mar-16 | 1046920.00 |
| 9 | Ricoh Heavy duty Copier/Network Printer - DGS&D - RC ( WO issued) | Mar-16 | 179600.00 |

ವಿಕಾಸಂ ನ ಮೂಲ ಸೌಕರ್ಯಗಳ ನಿರ್ವಹಣೆಗಾಗಿ ಕೆಳಕಾಣಿಸಿದ ವಾರ್ಷಿಕ ನಿರ್ವಹಣೆ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ.

| | | | |
|---|---|---|---|
| | **AMCs** | | |
| 1 | Comprehensive AMC of Dish wash Machine ( 1 No. @ hostel) | Apr-15 | 47460 |
| 2 | Security Service Contract | Apr-15 | 2715000 |
| 3 | AMC Electrical & Allied Works | Apr-15 | 1181000 |
| 4 | Comprehensive AMC of KONE Lift | May-15 | 49407 |
| 5 | Comprehensive AMC of EPABX systems | Jul-15 | 98567 |
| 6 | AMC of Civil & Allied Works | Jul-15 | 804000 |
| 7 | AMC of Bosch Audio Systems | Aug-15 | 109440 |
| 8 | Comprehensive AMC of Garden, Landscape | Aug-15 | 1084000 |
| 9 | Comprehensive AMC of Water Purifiers (19 No. of different capacity) | Nov-15 | 280000 |

**1.10 ಗ್ರಂಥಾಲಯ:**

ವಿಕಾಸಂ ವಿಶಾಲ ಶ್ರೇಣಿಯ ಶೈಕ್ಷಣಿಕ ಪುಸ್ತಕಗಳು, ನಿಯತಕಾಲಿಕಗಳು, ಆನ್‌ಲೈನ್ ನಿಯತಕಾಲಿಕಗಳು, ಸಿಡಿಗಳು/ ಡಿವಿಡಿಗಳು ಹಾಗೂ ವರದಿಗಳನ್ನು ಹೊಂದಿದೆ. ಈ ಗ್ರಂಥಾಲಯವನ್ನು ಒಬ್ಬ ಗ್ರಂಥಪಾಲಕರು ಸಹಾಯಕನ ನೆರವಿನಿಂದ ನಿರ್ವಹಿಸುತ್ತಿದ್ದಾರೆ. ಗ್ರಂಥಾಲಯ ವಿಷಯದಲ್ಲಿ ಪದವಿ ಹಾಗೂ ಡಿಪ್ಲೊಮೋ ಶೈಕ್ಷಣಿಕ ಹಿನ್ನೆಲೆ ಹೊಂದಿರುವ ಒಂದು ಪದವೀಧರ ಹಾಗೂ ಒಂದು ಡಿಪ್ಲೊಮೋ ಅಪ್ರೆಂಟಿಸ್‌ಗಳಿಗೆ ಅಪ್ರೆಂಟಿಸ್‌ಷಿಪ್ ತರಬೇತಿ ನೀಡಲಾಗುತ್ತಿದೆ. ಈ ರೀತಿ 3 (2 ಪದವೀಧರ ಹಾಗೂ 1 ಡಿಪ್ಲೊಮೋ) ಅಪ್ರೆಂಟಿಸ್‌ಗಳು ಒಂದು ವರ್ಷದ ಅಪ್ರೆಂಟಿಸ್‌ಷಿಪ್ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುತ್ತಾರೆ. ಗ್ರಂಥಾಲಯವು ಹಾಸ್ಟೆಲ್‌ನ ಪ್ರಶಿಕ್ಷಣಾರ್ಥಿಗಳಿಗೆ ಹಾಗೂ ಅತಿಥಿಗೃಹದ ನಿವಾಸಿಗಳಿಗೆ ಪತ್ರಿಕೆಗಳನ್ನು ಸರಬರಾಜು ಮಾಡುವ ಹಾಗೂ ಪುಸ್ತಕಗಳನ್ನು ಎರವಲು ನೀಡುವ ಮೂಲಕ ತನ್ನ ಸೇವೆಯನ್ನು ವಿಸ್ತರಿಸಿದೆ.

ವಿಕಾಸಂ ಸಂಸ್ಥೆಯ ಗ್ರಂಥಾಲಯನ್ನು 10,000 ಪುಸ್ತಕಗಳನ್ನು ಇಡುವ ಮಾದರಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಇದರೊಂದಿಗೆ ಓದಲು, ದಿನಪತ್ರಿಕೆಗಳನ್ನು ಪ್ರದರ್ಶಿಸಲು, ಹೊಸ ಪುಸ್ತಕಗಳ ಪ್ರದರ್ಶನ, ಗ್ರಂಥಾಲಯ ಬಳಕೆದಾರರಿಗೆ ಸ್ಥಳ, ಪುಸ್ತಕ ಪಡೆಯುವ ಮತ್ತು ಹಿಂತಿರುಗಿಸುವ ಸ್ಥಳ, ದಸ್ತಾವೇಜು, ಛಾಯಾಪ್ರತಿ, ಮಾಧ್ಯಮ ಚಾವಣಿ (Media vault) ಡಿವಿಡಿ / ಸಿಡಿ ಆಲ್ಬಮ್ಸ್ ಮತ್ತು ದಾಸ್ತಾನು ಕೊಠಡಿ ಇತ್ಯಾದಿಗಳಿಗೆ ಸ್ಥಳಾವಕಾಶ ಮಾಡಿಕೊಡಲಾಗಿದೆ. ಗ್ರಂಥಾಲಯವು 3114 ಪುಸ್ತಕಗಳು, 466 ವರದಿ ಹಾಗೂ ಜರ್ನಲ್‌ಗಳ ಸಂಪುಟಗಳು, 4894 ವರದಿಗಳು ಮತ್ತು 370 ಶೈಕ್ಷಣಿಕ ಸಿಡಿಗಳ ಜೊತೆಗೆ 12 ಪತ್ರಿಕೆ 18 ನಿಯತಕಾಲಿಕೆಗಳನ್ನು ಮತ್ತು 16 ಜರ್ನಲ್‌ಗಳನ್ನು ಒಳಗೊಂಡಿದೆ. ಇದಲ್ಲದೆ ಬ್ರಿಟಿಷ್ ಕೌನ್ಸಿಲ್ ಗ್ರಂಥಾಲಯದ ಸದಸ್ಯತ್ವ ಪಡೆದಿದ್ದು 6 e-Database ಜರ್ನಲ್ (SAGE), 70,000 ಇ–ಪುಸ್ತಕಗಳು, 14000 ಇ–ಜರ್ನಲ್‌ಗಳನ್ನು ಹೊಂದಿರುತ್ತದೆ. ಗ್ರಂಥಾಲಯವು ಕರ್ತವ್ಯ ನಿರ್ವಹಿಸುವ ಎಲ್ಲಾ ದಿನಗಳಲ್ಲಿ ಬೆಳಗ್ಗೆ 10.00 ಗಂಟೆಯಿಂದ ಸಂಜೆ 6.00 ಗಂಟೆಯವರಗೆ ತೆರೆದಿದ್ದು ತರಬೇತಿ ಸಮಯದಲ್ಲಿ ಬೆಳಗ್ಗೆ 9.00 ಗಂಟೆಯಿಂದ ಸಂಜೆ 7.00 ಗಂಟೆಯವರಗೆ ಕಾರ್ಯ ನಿರ್ವಹಿಸುತ್ತದೆ.

ಎಲ್ಲಾ ದಸ್ತಾವೇಜುಗಳನ್ನು Dewey decimal classification scheme ನಂತೆ ಎನ್‌ಐಸಿಯ ಇ–ಗ್ರಂಥಾಲಯ ತಂತ್ರಾಂಶ ಬಳಸಿ ಗಣಕೀಕೃತ ಗ್ರಂಥ ಸೂಚಿಯಲ್ಲಿ ಅಳವಡಿಸಲಾಗಿದೆ. ಓದುಗರಿಗೆ ಒಪಿಎಸಿ (Online Public Access Catalogue OPAC) ಸೌಲಭ್ಯಗಳನ್ನು ಒದಗಿಸಲಾಗಿದೆ. ಹೊಸದಾಗಿ ಗ್ರಂಥಾಲಯಕ್ಕೆ ಸೇರ್ಪಡೆಯಾಗಿರುವ ಗ್ರಂಥಗಳು ಮತ್ತು ಕಾರ್ಯ ಪತ್ರಗಳನ್ನು ಸಾಪ್ತಾಹಿಕವಾಗಿ ಪ್ರದರ್ಶಿಸಲಾಗುವುದು ಮತ್ತು ಪ್ರದರ್ಶಿಸಿದ ದಿನಾಂಕದ ನಂತರ ಅವುಗಳನ್ನು ಎರವಲು ಪಡೆಯಬಹುದಾಗಿದೆ. ಗ್ರಂಥಾಲಯದ ಎಲ್ಲಾ ಪುಸ್ತಕಗಳನ್ನು ಮತ್ತು ಆಸ್ತಿಗಳನ್ನು ಬಾರ್ ಕೋಡಿಂಗ್ ಮಾಡಿ ಗಣಕೀಕರಿಸಲಾಗಿದೆ.

## ಅಧ್ಯಾಯ – 2

### 2. ಬೌದ್ಧಿಕ ಕಾರ್ಯಗಳು

### 2.1 2015–16 ನೇ ಸಾಲಿನಲ್ಲಿ ವಿತ್ತೀಯ ಕಾರ್ಯ ನೀತಿ ಸಂಸ್ಥೆಯು ನಡೆಸಿದ ತರಬೇತಿಗಳು.

ವಿಕಾಸಂ ಗ್ರಾಹಕ ಕೇಂದ್ರಿತ ತರಬೇತಿ ಕಾರ್ಯಕ್ರಮವನ್ನು ಮತ್ತು ತರಬೇತಿ ಹೊಂದಿದವರಿಗೆ ಮಾರ್ಗದರ್ಶನವನ್ನು ಮುಂದುವರೆಸುತ್ತಾ ಹಿಂದಿನ ಹಾಗೂ ವರದಿಯ ಸಾಲಿನಲ್ಲಿ ಕೆಳಕಾಣಿಸಿದಂತೆ ತರಬೇತಿ ನೀಡಿದೆ:

| ಕ್ರ.ಸಂ | ಕ್ಯಾಲೆಂಡರ್ ವರ್ಷ/ಆರ್ಥಿಕ ವರ್ಷ | ನಡೆಸಲಾದ ತರಬೇತಿ ಕಾರ್ಯಕ್ರಮಗಳ ಸಂಖ್ಯೆ | ತರಬೇತಿ ಹೊಂದಿದ ಅಧಿಕಾರಿಗಳ ಸಂಖ್ಯೆ |
|---|---|---|---|
| 1 | 2014 | 59 | 2452 |
| 2 | 2015-16 | 121 | 3325 |

ವಾಣಿಜ್ಯ ತೆರಿಗೆ ಇಲಾಖೆ, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಹಾಗೂ ಲೆಕ್ಕ ಪತ್ರ ಇಲಾಖೆ, ಖಜಾನೆ ಇಲಾಖೆಗಳು ತರಬೇತಿ ಪಡೆದ ಮುಖ್ಯ ಗ್ರಾಹಕ ಇಲಾಖೆಗಳಾಗಿವೆ. ಇದಲ್ಲದೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಗೆ ಮತ್ತು ಸಾರ್ವಜನಿಕ ವಲಯ ಘಟಕಗಳಿಗೆ ವಿವಿಧ ಗ್ರಾಹಕ ಕೇಂದ್ರಿತ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ನಡೆಸಲಾದ ಮಾಹೆವಾರು ತರಬೇತಿ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

### 2.2 ತರಬೇತಿ ಮಾಡ್ಯೂಲ್‌ಗಳ ರಚನೆ:

1. ಜುಲೈ 2015 ರಲ್ಲಿ Enforcement-Vigilance ಮಾಡ್ಯೂಲನ್ನು ತಯಾರಿಸಿ ವಾಣಿಜ್ಯ ತೆರಿಗೆ ಇಲಾಖೆಗೆ ಸಲ್ಲಿಸಲಾಗಿದೆ.
2. ಪವರ್ ಸೆಕ್ಟರ್: ಪವರ್ ಸೆಕ್ಟರ್‌ನ ಅಧಿಕಾರಿಗಳಿಗೆ 2–3 ದಿನಗಳ ತರಬೇತಿ ನೀಡಲು ಶ್ರೀ ಎಂ.ಆರ್.ಶ್ರೀನಿವಾಸ ಮೂರ್ತಿ, ಐ.ಎ.ಎಸ್ (ನಿವೃತ್ತ) ಇವರ ಅಧ್ಯಕ್ಷತೆಯಲ್ಲಿ ರಚಿಸಿದ ಪರಿಣಿತ ಸಮಿತಿಯು (a) Training Programme in Regulatory aspects and (b) Training Programme on 'Commercial Aspects of ESCOM Operations' ಎಂಬ ತರಬೇತಿ ಮಾಡ್ಯೂಲುಗಳನ್ನು ವಿನ್ಯಾಸಗೊಳಿಸಿದೆ. ಈ ಪೈಕಿ 2015–16 ನೇ ಸಾಲಿನಲ್ಲಿ 'Commercial Aspects of ESCOM Operations' ತರಬೇತಿ ಕಾರ್ಯಕ್ರಮವನ್ನು ನಡೆಸಲಾಗಿದೆ.
3. ಖಜಾನೆ ಇಲಾಖೆ:

   ಎ) ಖಜಾನೆ ಇಲಾಖೆಯು ಅಧಿಕಾರಿಗಳ ಸಾಮರ್ಥ್ಯ ವರ್ಧನೆ ಮತ್ತು ವೃಂದ ಮತ್ತು ನೇಮಕಾತಿ ಪರಿಷ್ಕೃತ ನಿಯಮಗಳ ಪ್ರಸ್ತಾವನೆಯಲ್ಲಿ ಇರುವ ಅಗತ್ಯತೆಯನ್ವಯ ತರಬೇತಿ ಮಾಡ್ಯೂಲ್‌ಗಳನ್ನು ತಯಾರಿಸಲು ವಿಷಯಗಳನ್ನು ಗುರುತಿಸಿದೆ. ಮುಖ್ಯ ಘಟಕಗಳನ್ನು ಹಾಗೂ ಪುನರ್ ಮನನ ಘಟಕಗಳನ್ನು ವಿನ್ಯಾಸಗೊಳಿಸುವ ಹೊಣೆಗಾರಿಕೆಯನ್ನು ವಿಕಾಸಂ ಗೆ ನೀಡಲಾಗಿದೆ.

   ಬಿ) ಮುಖ್ಯ ಘಟಕ: ಸರ್ಕಾರವು ಆದೇಶ ಸಂಖ್ಯೆ FPI 20 TRG 2014 ದಿನಾಂಕ 05/112014 ರಲ್ಲಿ ಕೆಳಕಾಣಿಸಿದ 8 ಖಜಾನೆ ಮಾಡ್ಯೂಲ್ ಅಭಿವೃದ್ಧಿ ಸಮಿತಿಗಳನ್ನು ರಚಿಸಿದೆ. ಅದರಂತೆ ಮುಖ್ಯ ಘಟಕಗಳನ್ನು ವಿನ್ಯಾಸಗೊಳಿಸಲಾಗಿದ್ದು 2015–16 ನೇ ಸಾಲಿನಲ್ಲಿ ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ಹೊರತುಪಡಿಸಿ ಉಳಿದ ಮಾಡ್ಯೂಲ್‌ಗಳಲ್ಲಿ ಒಂದರಂತೆ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

      i. Financial Codes Governing Treasuries
      ii. Treasury Operations
      iii. Information and Communication Technology
      iv. Other Stakeholders in Treasury Transaction
      v. Organisational Behaviour and Human Resource Management

vi. Law and Service Rules
vii. Financial Management
viii. Project Management

ಸಿ) ನಾಯಕತ್ವ ಹಾಗೂ ನಿರ್ವಹಣಾ ಕೌಶಲ್ಯ ಮಾಡ್ಯೂಲ್: ಮಾಡ್ಯೂಲ್‌ಗಳನ್ನು ಅಂತಿಮಗೊಳಿಸಲು ಕಾರ್ಯದರ್ಶಿ (ಆ&ಸಂ), ಆ.ಇ ಇವರ ಅಧ್ಯಕ್ಷತೆಯಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ಅವರು ಹಿರಿಯ ಅಧಿಕಾರಿಗಳಿಗೆ ನಿರ್ವಹಣಾ ಹೊಣೆಗಾರಿಕೆ ನಿಭಾಯಿಸಲು ತರಬೇತಿ ಮಾಡ್ಯೂಲ್ ವಿನ್ಯಾಸಗೊಳಿಸುವಂತೆ ಸಲಹೆ ನೀಡಿದರು. 'ನಾಯಕತ್ವ ಹಾಗೂ ನಿರ್ವಹಣಾ ಕೌಶಲ್ಯ ಮಾಡ್ಯೂಲ್' ವಿನ್ಯಾಸಗೊಳಿಸಲು ಆದೇಶ ಸಂಖ್ಯೆ FPI/TMDC/1/ 2014 ದಿನಾಂಕ 07/08/2015 ರಲ್ಲಿ 1 ಖಜಾನೆ ಮಾಡ್ಯೂಲ್ ಅಭಿವೃದ್ಧಿ ಸಮಿತಿ ರಚಿಸಲಾಯಿತು. 2016–17 ನೇ ಆರ್ಥಿಕ ವರ್ಷದಲ್ಲಿ ಈ ತರಬೇತಿ ಕಾರ್ಯಕ್ರಮವನ್ನು ನಡೆಸಲು ಯೋಜಿಸಿದೆ.

ಡಿ) ಪುನರ್ ಮನನ ತರಬೇತಿ ಮಾಡ್ಯೂಲ್: ಪರಿಷ್ಕೃತ ವೃಂದ ಮತ್ತು ತರಬೇತಿ ನಿಯಮಗಳಂತೆ ಕಡ್ಡಾಯಗೊಳಿಸಿದ ತರಬೇತಿಗಳನ್ನು ಅಂತಿಮಗೊಳಿಸುವ ಚರ್ಚೆಯಲ್ಲಿ ಗುರುತಿಸಲಾದ ಪ್ರತಿ ಹಂತಕ್ಕೆ ಪ್ರತಿ ವರ್ಷದಲ್ಲಿ 2 ಪುನರ್ ಮನನ ತರಬೇತಿಗಳನ್ನು ನಡೆಸಲು ನಿರ್ಣಯಿಸಲಾಯಿತು. ಅದರಂತೆ ನಿರ್ದೇಶಕರು, ವಿಕಾಸಂ ಇವರು ಹೊರಡಿಸಿದ ಆದೇಶ ಸಂಖ್ಯೆ FPI/TMDC/1/ 2014 ದಿನಾಂಕ 16/10/2015 ರಂತೆ ಸಂಚಾಲಕರು ಈ ಮುಂದಿನ ಮಾಡ್ಯೂಲ್‌ಗಳನ್ನು ವಿನ್ಯಾಸಗೊಳಿಸಿರುತ್ತಾರೆ. 2016–17 ನೇ ಸಾಲಿನಲ್ಲಿ ಈ ಮಾಡ್ಯೂಲ್‌ಗಳ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಯೋಜಿಸಿದೆ.

i. Treasury Operations
ii. Financial Codes Governing Treasuries
iii. Law and Service Rules
iv. Information and Communication Technology
v. Tax Laws – Income Tax, VAT and Sales Tax
vi. Khajane II

4. ಆಂತರಿಕ ಲೆಕ್ಕ ಪರಿಶೋಧನೆ: ಅ) ಆಂತರಿಕ ಲೆಕ್ಕ ಪರಿಶೋಧನೆ ಮೂಲ ಸಿದ್ಧಾಂತಗಳನ್ನು ಉಪಯೋಗಿಸುವ ಬಗ್ಗೆ ಕೌಶಲ್ಯ ಅಭಿವೃದ್ಧಿ ಆ) ಆಂತರಿಕ ನಿರ್ವಹಣೆ, ಸುರಕ್ಷತೆ ಮತ್ತು ಆಂತರಿಕ ಲೆಕ್ಕ ಪರಿಶೋಧನೆ ವಿಷಯಗಳನ್ನು ಪರಿಚಿತಗೊಳಿಸಲು ಮತ್ತು ಕ) ಮೇಲೆ ಹೇಳಲಾದ ಸಿದ್ಧಾಂತಗಳ ಕಾರ್ಯ ಜ್ಞಾನಗಳಿಂದ ಕ್ಷಮತೆ ಹಾಗೂ ಸಾಮರ್ಥ್ಯ ವೃದ್ಧಿಸುವ ಉದ್ದೇಶದಿಂದ ಕ.ರಾ.ಲೆ.ಪ &ಲೆ.ಪ ಇಲಾಖೆಯ ಆಂತರಿಕ ಲೆಕ್ಕ ಪರಿಶೋಧನೆ ಶಾಖೆಯ ಅಧಿಕಾರಿಗಳಿಗೆ ಹಾಗೂ ರಾಜ್ಯದ ಇತರೆ ಇಲಾಖೆಯ ಅಧಿಕಾರಿಗಳಿಗೆ ತರಬೇತಿ ನೀಡಲು 3 ದಿನದ ಆಂತರಿಕ ಲೆಕ್ಕ ಪರಿಶೋಧನೆ ಆಡಿಟ್ ಮಾಡ್ಯೂಲನ್ನು ವಿನ್ಯಾಸಗೊಳಿಸಲಾಗಿದೆ. ಪ್ರಸ್ತುತ ಈ ವಿಷಯವು ಕ.ರಾ.ಲೆ.ಪ &ಲೆ.ಪ ಇಲಾಖೆಯ ಆಡಿಟ್ ತರಬೇತಿಯ ಭಾಗವಾಗಿದ್ದು ತರಬೇತಿ ನೀಡಲಾಗುತ್ತಿದೆ.
5. ಬಾಹ್ಯ ಅನುದಾನಿತ ಯೋಜನೆ (External Aided Project EAP): ಬಾಹ್ಯ ಅನುದಾನಿತ ಯೋಜನೆಗಳನ್ನು ಅನುಷ್ಠಾನಗೊಳಿಸುವ ಏಜೆನ್ಸಿಯ ಅಧಿಕಾರಿಗಳಿಗೆ ತರಬೇತಿ ನೀಡಲು ಆದೇಶ ಸಂಖ್ಯೆ FPI/216/EAP/Trg/17/2014-15 ದಿನಾಂಕ 07/04/2015ರಲ್ಲಿ ಪಠ್ಯ ಕ್ರಮ ಅಭಿವೃದ್ಧಿ ಸಮಿತಿ ರಚಿಸಿದೆ. 4 ದಿನಗಳ ತರಬೇತಿ ಮಾಡ್ಯೂಲ್ ವಿನ್ಯಾಸಗೊಳಿಸಿದ್ದು, ದಿನಾಂಕ 1 ರಿಂದ 4 ಜುಲೈ 2015 ರವರೆಗೆ ಮೊದಲ ತಂಡದ 39 ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ.
6. ಬಡ್ತಿ ಹೊಂದಿದ ವಾಣಿಜ್ಯ ತೆರಿಗೆ ಅಧಿಕಾರಿಗಳಿಗೆ ವೃತ್ತಿ ಬುನಾದಿ ತರಬೇತಿ: ವಾಣಿಜ್ಯ ತೆರಿಗೆ ಪರಿವೀಕ್ಷಕರ ಹುದ್ದೆಯಿಂದ ವಾಣಿಜ್ಯ ತೆರಿಗೆ ಅಧಿಕಾರಿಗಳಾಗಿ ಬಡ್ತಿ ಹೊಂದಿದ ಅಧಿಕಾರಿಗಳಿಗೆ 6 ದಿನಗಳ ಸಮಗ್ರ ತರಬೇತಿ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಿ ಅಕ್ಟೋಬರ್ ನಿಂದ ಡಿಸಂಬರ್ 2015 ರವರೆಗೆ 3 ತಂಡಗಳಲ್ಲಿ 90 ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ.
7. ಮಹಾಲೇಖಾಪಾಲರ ಆಡಿಟ್ ಪ್ಯಾರಾಗಳಿಗೆ ಅನುಸರಣೆ ಮಾಡ್ಯೂಲ್: ರಾಜ್ಯ ಸರ್ಕಾರದ ವಿವಿಧ ಅಧಿಕಾರಿಗಳಿಗೆ

ಮಹಾಲೇಖಪಾಲರ ಆಡಿಟ್ ಪ್ಯಾರಾಗಳಿಗೆ ಅನುಸರಣೆ ಕುರಿತು ಒಂದು ದಿನದ ಗ್ರಾಹಕ ಕೇಂದ್ರಿತ ತರಬೇತಿ ಮಾಡ್ಯೂಲನ್ನು ವಿನ್ಯಾಸಗೊಳಿಸಿದೆ. ಮೇ 2015, ಸೆಪ್ಟೆಂಬರ್ 2015 ಮತ್ತು ಜನವರಿ 2016 ರಲ್ಲಿ 3 ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

8. ಆಂತರಿಕ ಆರ್ಥಿಕ ಸಲಹೆಗಾರರಿಗೆ ತರಬೇತಿ ಕಾರ್ಯಕ್ರಮ: ಆರ್ಥಿಕ ಇಲಾಖೆಯ ಕೋರಿಕೆ ಮೇರೆಗೆ ಆಂತರಿಕ ಆರ್ಥಿಕ ಸಲಹೆಗಾರರಿಗೆ ಹಾಗೂ ಆಂತರಿಕ ಆರ್ಥಿಕ ಸಲಹೆ ಶಾಖೆಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ 'Role of Internal Financial Advisers, GoK' ವಿಷಯದ ಕುರಿತು 3 ದಿನದ ಗ್ರಾಹಕ ಕೇಂದ್ರಿತ ತರಬೇತಿ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಿದೆ. ಡಿಸಂಬರ್ 2015 ರಲ್ಲಿ ಈ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು.
9. ಆಸ್ತಿ–ಋಣ ನಿರ್ವಹಣೆ: ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ–ಋಣ ನಿರ್ವಹಣೆ ಇಲಾಖೆಯ ಅಧಿಕಾರಿಗಳಿಗೆ ತರಬೇತಿ ನೀಡಲು 6 ದಿನಗಳ ಅವಧಿಯ ತರಬೇತಿ ಮಾಡ್ಯೂಲ್ ವಿನ್ಯಾಸಗೊಳಿಸಿದ್ದು 2016–17 ನೇ ಸಾಲಿನಲ್ಲಿ ತರಬೇತಿ ನೀಡಲು ಯೋಜಿಸಲಾಗಿದೆ.

ವಿಕಾಸಂ ಪರಿಣಿತರ ಸಹಾಯದಿಂದ ಕೆಳಕಾಣಿಸಿದ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕೇಂದ್ರದಿಂದ ಈ ಕೆಳಕಾಣಿಸಿದ ಹೊಸ ತರಬೇತಿ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಿ ತರಬೇತಿ ನೀಡಲಾಗಿದೆ:

10. Analysis of Financial Statements
11. Contract Management.
12. Finance for Non-Finance Executives.
13. Public Private Partnerships.

**2.3 2014 (ii) ತಂಡದ ಪರೀಕ್ಷತಾ ಐಇಎಸ್ ಅಧಿಕಾರಿಗಳಿಗೆ ತರಬೇತಿ:**

ಭಾರತ ಸರ್ಕಾರದ ಆರ್ಥಿಕ ವ್ಯವಹಾರಗಳ ಇಲಾಖೆಯು 2014 (ii) ಪರೀಕ್ಷತಾ ಐಇಎಸ್ ಅಧಿಕಾರಿಗಳಿಗೆ ವೃತ್ತಿ ತರಬೇತಿ ನೀಡುವಂತೆ ಕರ್ನಾಟಕ ಸರ್ಕಾರವನ್ನು ಕೋರಿದ ಕಾರಣ ಸಿ.ಆ.ಸು.ಇ ತಾತ್ವಿಕವಾಗಿ ಒಪ್ಪಿಗೆ ನೀಡಿ ಶ್ರೀಮತಿ ಪ್ರಾಚಿ ಪಾಂಡೆ, I.A&AS, ನಿರ್ದೇಶಕರು, ವಿತ್ತೀಯ ಕಾರ್ಯನೀತಿ ಸಂಸ್ಥೆ ರವರನ್ನು ನೋಡಲ್ ಅಧಿಕಾರಿಯನ್ನಾಗಿ ನಾಮ ನಿರ್ದೇಶನ ಮಾಡಿದೆ. ಅದರಂತೆ ದಿನಾಂಕ 04/01/2016 ರಂದು ವರದಿ ಮಾಡಿಕೊಂಡ 4 ಪರೀಕ್ಷತಾ ಐಇಎಸ್ ಅಧಿಕಾರಿಗಳಿಗೆ ದಿನಾಂಕ 04/01/2016 ರಿಂದ 26/02/2016 ರವರೆಗೆ 8 ವಾರಗಳ ತರಬೇತಿ ನೀಡಲಾಗಿದೆ.

**2.4 ವಿತ್ತೀಯ ಕಾರ್ಯನೀತಿ ಸಂಸ್ಥೆಯಲ್ಲಿ ವೃತ್ತಿ ಬುನಾದಿ ತರಬೇತಿ:**

ಕಾರ್ಯದರ್ಶಿ (ಆಯವ್ಯಯ & ಸಂಪನ್ಮೂಲ), ಆರ್ಥಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪರೀಕ್ಷತಾ ಅಧಿಕಾರಿಗಳಿಗೆ ವೃತ್ತಿ ಬುನಾದಿ ತರಬೇತಿ ನಡೆಸಲು ವಿತ್ತೀಯ ಕಾರ್ಯನೀತಿ ಸಂಸ್ಥೆಗೆ ಸಲಹೆ ಮಾಡಲಾಗಿದೆ. ಅದರಂತೆ ಶ್ರೀ ಕೆ.ಕೆ.ಶರ್ಮ, ಸಲಹೆಗಾರರು ಹಾಗೂ ಬೋಧಕರು ಇವರ ಅಧ್ಯಕ್ಷತೆಯ ಸಮಿತಿಯು 6 ವಾರಗಳ ಅವಧಿಯ ತರಬೇತಿಗೆ ಪಠ್ಯಕ್ರಮ ರಚಿಸಿದೆ.

**2.5 ಸಂಶೋಧನೆ ಮತ್ತು ಇತರೆ ಚಟುವಟಿಕೆಗಳು:**

**ವಿಕಾಸಂ ಯಲ್ಲಿ ರಚಿಸಿರುವ ಸಂಶೋಧನಾ ಕೋಶಗಳು:**

1) ಸಾಲ ನಿರ್ವಹಣೆ ಹಾಗೂ ಆರ್ಥಿಕ ವಿಶ್ಲೇಷಣಾ ಕೋಶ (DMFA):

ಈ ಕೋಶವನ್ನು ರಾಜ್ಯದ ಸಾಲ ಕ್ರೋಢೀಕರಣಕ್ಕೆ ಬೆಂಬಲ ಮತ್ತು ಸಲಹೆ ಸೇರಿದಂತೆ ಬಾಹ್ಯ ಸಾಲಗಳ ಅಗತ್ಯತೆಯ ವಿಶ್ಲೇಷಣೆಗೆ ಹಾಗೂ ನಿರ್ವಹಣೆಗೆ ಮೇ 2014 ರಲ್ಲಿ ರಚಿಸಲಾಯಿತು. ಈ ಕೋಶವು ವಿತ್ತೀಯ ಸುಧಾರಣೆಯ ಪ್ರಾಜೆಕ್ಟ್ ಮಾನಿಟರಿಂಗ್ ಯೂನಿಟ್‌ನ ನಿಕಟ ಸಂಪರ್ಕದಲ್ಲಿ ಹಾಗೂ ವಿಕಾಸಂ ನಿರ್ದೇಶಕರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಾಲ ನಿರ್ವಹಣೆ ಹಾಗೂ ಆರ್ಥಿಕ ವಿಶ್ಲೇಷಣಾ ಕೋಶ ಮತ್ತು ಪ್ರಾಜೆಕ್ಟ್ ಮಾನಿಟರಿಂಗ್ ಯೂನಿಟ್ ಸೆಪ್ಟೆಂಬರ್ 2015 ರಲ್ಲಿ EAP ಯೋಜನೆಗಳ ಬ್ಯಾಕ್ ಟು ಬ್ಯಾಕ್ ಸಾಲಗಳ ಸ್ಟೇಟಸ್ ವರದಿಯನ್ನು ತಯಾರಿಸಿದ್ದು ವಿಕಾಸಂ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲಾಗಿದೆ.

2) ಆರ್ಥಿಕ ವಿಶ್ಲೇಷಣಾ ಕೋಶ (EAC):

ಕರ್ನಾಟಕದ ಆವಕಗಳ ಮಾರುಕಟ್ಟೆ ಬೆಲೆ ಚಲನೆಯನ್ನು ನಿರ್ವಹಿಸಲು ಸಹಾಯಕವಾಗುವ ನೀತಿಯನ್ನು ನಿರೂಪಿಸಲು ನೀತಿ ಸಂಬಂಧಿತ ದತ್ತಾಂಶ ಒದಗಿಸುವ ಉದ್ದೇಶದಿಂದ "ಕರ್ನಾಟಕದ ಆಯ್ದ ಕೃಷಿ ಉತ್ಪನ್ನಗಳ " ಬಗ್ಗೆ ಮಾಸಿಕ ವರದಿಯನ್ನು ತಯಾರಿಸಲಾಗುತ್ತಿದೆ. ದತಾಂತ್ತಶಗಳನ್ನು ವಿಶ್ಲೇಷಿಸಲು ಕೃಷಿ ಮಾರುಕಟ್ಟೆ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಾರುಕಟ್ಟೆ ಮಂಡಳಿಯ ಪೋರ್ಟಲ್ ಆದ ಕೃಷಿ ಮಾರುಕಟ್ಟೆ ವಾಹಿನಿಯ ಆನ್ ಲೈನ್ ನಲ್ಲಿ ಲಭ್ಯವಾಗುವ ದತ್ತಾಂಶಗಳನ್ನು ಉಪಯೋಗಿಸಲಾಗುತ್ತಿದೆ. 20 ಆವಕ ಕೃಷಿ ಉತ್ಪನ್ನಗಳ ಬೆಲೆಯ ಟ್ರೆಂಡ್ ಅನ್ನು ಅಖಿಲ ಭಾರತ, ಪ್ರಾಂತೀಯ ಮತ್ತು ಜಿಲ್ಲಾ ಮಟ್ಟದ ಹೀಗೆ 3 ಮಟ್ಟದ ಬೆಲೆಗಳೊಡನೆ ತುಲನೆ ಮಾಡಿ ಪರಿಶೀಲಿಸಿ ವರದಿಯ ವಿಶ್ಲೇಷಣೆ ಮಾಡಲಾಗುತ್ತಿದೆ. ಅಖಿಲ ಭಾರತ ಮತ್ತು ಜಿಲ್ಲಾ ಮಟ್ಟದ ತುಲನೆಗಾಗಿ ಭಾರತ ಸರ್ಕಾರದ ಕೃಷಿ ಸಚಿವಾಲಯ ಹಾಗೂ ಗ್ರಾಹಕ ವ್ಯವಹಾರಗಳ ಸಚಿವಾಲಯದ ದತ್ತಾಂಶಗಳನ್ನು ಉಪಯೋಗಿಸಲಾಗುತ್ತಿದೆ. ಏಪ್ರಿಲ್ 2015 ಮಾಹೆಯಲ್ಲಿ 13 ಕೃಷಿ ಉತ್ಪನ್ನಗಳ ವರದಿಯನ್ನು ಸಿದ್ಧಪಡಿಸಲಾಯಿತು. ಮುಂದುವರೆದು ನವಂಬರ್ 2015 ರವರೆಗೆ ಪ್ರತಿ ತಿಂಗಳು ಒಂದು ಹೊಸ ಕೃಷಿ ಉತ್ಪನ್ನವನ್ನು ಸೇರಿಸಿ ವಿಶ್ಲೇಷಣಾ ವರದಿಯನ್ನು ಸಿದ್ಧಪಡಿಸಲಾಯಿತು. ನವಂಬರ್ 2015 ಮಾಹೆಯ ನಂತರ ಕೃಷಿ ಉತ್ಪನ್ನಗಳ ಸಂಖ್ಯೆಯನ್ನು 20 ಕ್ಕೆ ನಿಲ್ಲಿಸಿ ವಿಶ್ಲೇಷಣಾ ವರದಿ ಸಿದ್ಧಪಡಿಸಿ ಕೆಳಕಾಣಿಸಿದ ಇಲಾಖೆಗಳಿಗೆ/ ಅಧಿಕಾರಿಗಳಿಗೆ ಕಳುಹಿಸಲಾಯಿತು.

ಎ. ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ
ಬಿ. ಯೋಜನೆ, ಯೋಜನಾ ನಿರ್ವಹಣೆ ಮತ್ತು ಸಾಂಖ್ಯಿಕ ಇಲಾಖೆ
ಸಿ. ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ
ಡಿ. ಕೃಷಿ ಇಲಾಖೆ
ಇ. ಅಪರ ಮುಖ್ಯ ಕಾರ್ಯದರ್ಶಿ–ಕಂ–ಅಭಿವೃದ್ಧಿ ಆಯುಕ್ತರು
ಎಫ್. ನಿರ್ದೇಶಕರು, ಕೃಷಿ ಮಾರುಕಟ್ಟೆ ಇಲಾಖೆ
ಜಿ. ಸಹಕಾರ ಇಲಾಖೆ
ಹೆಚ್. ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ.

**3. ಲಿಂಗಾಧಾರಿತ ಆಯವ್ಯಯ ಕೋಶ:**

1.ಲಿಂಗಾಧಾರಿತ ಆಯವ್ಯಯ ವರದಿ ತಯಾರಿಕೆ:

ವಿತ್ತೀಯ ಕಾರ್ಯನೀತಿ ಸಂಸ್ಥೆಯು ಲಿಂಗಾಧಾರಿತ ಆಯವ್ಯಯ ವರದಿ ತಯಾರಿಕೆಯಲ್ಲಿ ತಾಂತ್ರಿಕ ಬೆಂಬಲವನ್ನು ನೀಡಿ ಪ್ರತಿ ವರ್ಷದಂತೆ ಇನ್ನಿತರೆ ಆಯವ್ಯಯ ವರದಿಗಳ ಜೊತೆಯಲ್ಲಿ ಲಿಂಗಾಧಾರಿತ ಆಯವ್ಯಯ ವರದಿಯನ್ನೂ ಶಾಸಕ ಸಭೆಯಲ್ಲಿ ಪ್ರಸ್ತುತಪಡಿಸಲಾಯಿತು. ವಿಕಾಸಂ ಈ ಕಾರ್ಯದಲ್ಲಿ ಆರ್ಥಿಕ ಇಲಾಖೆಯ ಆಯವ್ಯಯ ಶಾಖೆ/ ಗಣಕ ಕೋಶದೊಂದಿಗೆ ಸಮನ್ವಯಿಸಿದೆ. ವಿಕಾಸಂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ ಲಿಂಗಾಧಾರಿತ ಆಯವ್ಯಯ ವರದಿ ತಯಾರಿಕೆಯ ಜವಾಬ್ದಾರಿ ವಹಿಸಿದೆ.

2. ನಡೆಸಿದ ತರಬೇತಿ:

ಎ. ಜೂನ್ ಮಾಹೆಯಿಂದ ಅಕ್ಟೋಬರ್ 2015 ರವರೆಗೆ ವಿಕಾಸಂನ ವತಿಯಿಂದ 'ಲಿಂಗಾಧಾರಿತ ಆಯವ್ಯಯ' ದ ಕುರಿತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ 'ಎ' ಮತ್ತು 'ಬಿ' ಗುಂಪಿನ ಅಧಿಕಾರಿಗಳಿಗೆ 9 ತರಬೇತಿ ಕಾರ್ಯಕ್ರಮಗಳ ಸರಣಿ ನಡೆಸಲಾಯಿತು. ಈ ತರಬೇತಿಯು (ಅ) ಚಾಲ್ತಿಯಲ್ಲಿರುವ ಲಿಂಗಾಧಾರಿತ ಆಯವ್ಯಯ ಚಟುವಟಿಕೆಗಳ ಹಾಗೂ ಕ್ರಮಗಳ ಕುರಿತು ಬೆಳಕು ಚೆಲ್ಲಲು ಮತ್ತು (ಬಿ) ಪರಿಣಾಮಕಾರಿ ಸೇವೆಗಳ ನೀಡುವಿಕೆಯ ವೃದ್ಧಿಗೆ ಒತ್ತು ನೀಡಿದೆ.

ಬಿ. ಜನವರಿ 2016 ರಲ್ಲಿ 1, ಫೆಬ್ರುವರಿ 2016 ರಲ್ಲಿ 5 ಹೀಗೆ ಒಟ್ಟು 6 ಕಾರ್ಯಾಗಾರಗಳನ್ನು ನಡೆಸಲಾಗಿದೆ. 2015–16 ನೇ ಸಾಲಿನ ಲಿಂಗಾಧಾರಿತ ಆಯವ್ಯಯ ದಲ್ಲಿ ಪ್ರಕಟಿಸಲಾದ ಯೋಜನೆಗಳ ಮೌಲ್ಯಮಾಪನ ಮಾಡುವುದು ಹಾಗೂ ಆರ್ಥಿಕ ಇಲಾಖೆಯು ನವಂಬರ್ 2015 ರಲ್ಲಿ ಹೊರಡಿಸಿದ 2016–17 ನೇ ಸಾಲಿನ ಆಯವ್ಯಯ ಸುತ್ತೋಲೆಯಲ್ಲಿ ತಿಳಿಸಿದಂತೆ ಮಾಹಿತಿಗಳನ್ನು ಪಡೆಯುವುದು ಈ ಕಾರ್ಯಾಗಾರಗಳ ಉದ್ದೇಶವಾಗಿತ್ತು.

3. ಇತರೆ:

ಎ. ಲಿಂಗಾಧಾರಿತ ಆಯವ್ಯಯದ ವರದಿಯನ್ನು ಹೊರತರುವ ಉದ್ದೇಶವನ್ನು ಸಾಧಿಸಲು ಕೈಗೊಳ್ಳಬೇಕಾದ ಅಂತಿಮ ಪ್ರಯತ್ನಗಳ ಕುರಿತು ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರಿಂದ ಪತ್ರ ಕಳುಹಿಸಲಾಯಿತು. ಆರ್ಥಿಕ ಇಲಾಖೆಯ ಪತ್ರಕ್ಕೆ ಪ್ರತಿಯಾಗಿ ಡಾ.ಪುಷ್ಪ.ಎಂ., ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು 2016–17 ನೇ ಸಾಲಿನ ಲಿಂಗಾಧಾರಿತ ಆಯವ್ಯಯದ ವರದಿ ತಯಾರಿಕೆಯ ಪ್ರಾಥಮಿಕ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು.

ಬಿ. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಶೇಷ ಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಅಧ್ಯಕ್ಷರಾಗಿ ಕರೆದ ಲಿಂಗಾಧಾರಿತ ಆಯವ್ಯಯ ಪರಿಶೀಲನಾ ಸಭೆಗಳಲ್ಲಿ ನಿರ್ದೇಶಕರು, ವಿಕಾಸಂ, ವಿಶೇಷಾಧಿಕಾರಿ ಮತ್ತು ಸಂಶೋಧನಾ ಸಲಹೆಗಾರರು ಭಾಗವಹಿಸಿದ್ದರು.

ಸಿ. 14ನೇ ವಿಧಾನ ಸಭಾ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ 5 ನೇ ವರದಿಯ ಶಿಫಾರಸ್ಸುಗಳ ಅನುಸರಣಾ ವರದಿಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಯಿತು.

**2.6 ಸಮಾಲೋಚನೆ:**

ಎ) ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ: ಒಬ್ಬ ಬೋಧಕರು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ತಾಂತ್ರಿಕ ಸಮಿತಿಯಲ್ಲಿ ವಿಕಾಸಂ ಅನ್ನು ಪ್ರತಿನಿಧಿಸಿರುತ್ತಾರೆ. ಕೆಳಕಾಣಿಸಿದ ವಿಷಯಗಳ ಬಗ್ಗೆ ಸಮಾಲೋಚನೆ ಒದಗಿಸಲಾಯಿತು:

1. ಮೌಲ್ಯ ಮಾಪನ ಕಲಿಕೆಗೆ ನಿಬಂಧನೆ ಅಂಶಗಳನ್ನು ಚರ್ಚಿಸಿ ಅನುಮೋದನೆ ನೀಡಲಾಯಿತು.
2. ಮೌಲ್ಯ ಮಾಪನ ಕಲಿಕೆಯ ಕಾರ್ಯ ಯೋಜನೆ/ ಆರಂಭಿಕ ವರದಿಯ ಬಗ್ಗೆ ಪ್ರಸ್ತುತಗೊಳಿಸಿ ಅನುಮೋದಿಸಲಾಯಿತು.
3. ಮೌಲ್ಯ ಮಾಪನ ಕಲಿಕೆಯ ಮೌಲ್ಯಮಾಪನ ಅಧ್ಯಯನದ ವರದಿಯ ಅಂತಿಮ ಕರಡನ್ನು ಪ್ರಸ್ತುತಗೊಳಿಸಲಾಯಿತು.

ಬಿ) ಸುಲಭ ವ್ಯವಹಾರ: ಯುಕೆ ಸರ್ಕಾರದ ಸಹಯೋಗದಲ್ಲಿ ಸುಲಭ ವ್ಯವಹಾರದ ಪ್ರದೇಶಗಳನ್ನು ಗುರುತಿಸಲು ಕರ್ನಾಟಕ ಸರ್ಕಾರವು ಬ್ರಿಟಿಷ್ ಹೈ ಕಮೀಷನ್ ಪ್ರತಿನಿಧಿಗಳು, ನವದೆಹಲಿ ಮತ್ತು ಉಪ ಹೈ ಕಮೀಷನ್, ಬೆಂಗಳೂರು ಇವರೊಂದಿಗೆ ಸಂಪರ್ಕದಲ್ಲಿದೆ. ಈ ಕುರಿತು ಎಲ್ಲಾ ತೆರಿಗೆ ಇಲಾಖೆಗಳ ಸಾಮರ್ಥ್ಯ ವರ್ಧನೆ ಹಾಗೂ ಮೂರನೆ ವ್ಯಕ್ತಿ ಸಮಾಲೋಚಕ ಬೆಂಬಲ ಕಾರ್ಯದಲ್ಲಿ ವಿಕಾಸಂ ಜೊತೆ ನೀಡಿದೆ.

**2.7 ಪ್ರಗತಿಯಲ್ಲಿರುವ ಸಂಶೋಧನೆ:**

ಎ. ‘Performance Evaluation of Social Pensions in Karnataka’ ವಿಷಯದ ಕುರಿತು ಅಧ್ಯಯನ ಮಾಡಲು 2 ತಿಂಗಳ ಅವಧಿಗೆ ಅಲ್ಪಾವಧಿ ಸಮಾಲೋಚಕರನ್ನಾಗಿ ನೇಮಿಸಲಾಗಿದೆ.

ಬಿ. 6 ವಾರಗಳ ಅವಧಿಗೆ ವಿಕಾಸಂ ಯಲ್ಲಿ ವಿತ್ತೀಯ ವಿಷಯದಲ್ಲಿ ಅಧ್ಯಯನ ಮಾಡಲು ಇಂಟರ್ನ್ ನೇಮಕಾತಿ ಮಾಡಿದೆ.

ಸಿ. ‘14 ನೇ ಆರ್ಥಿಕ ಆಯೋಗ ‘ ದ ವಿಷಯದ ಕುರಿತು ಅಧ್ಯಯನ ನಡೆಸಲು 2 ತಿಂಗಳ ಅವಧಿಗೆ ಅಲ್ಪಾವಧಿ ಸಮಾಲೋಚಕರನ್ನು ನೇಮಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಡಿ. ‘Convergence of Governance towards development of organisations’ ಸಂಶೋಧನಾ ಪತ್ರವನ್ನು ದಿನಾಂಕ 25/11/2015 ರಂದು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಮಂಡಿಸಲಾಯಿತು.

**2.8 ಇತರೆ:**

ನೀತಿಗಳು:

ಎ) ಸರ್ಕಾರವು ಆದೇಶ ಸಂಖ್ಯೆ ಆಇ 28 ಸಾವಿಯೋ 2015 ದಿನಾಂಕ 7/10/2015 ರಲ್ಲಿ ಇಂಟರ್ನ್‌ಶಿಪ್ ಮಾರ್ಗದರ್ಶನ ಮತ್ತು ಆಯ್ಕೆ ವಿಧಾನಗಳನ್ನು ಹೊರಡಿಸಿ ವಿಕಾಸಂ ಯು ಪ್ರಸ್ತಾಪಿಸಿರುವಂತೆ 2015–16 ನೇ ಸಾಲಿನಲ್ಲಿ ತೆಗೆದುಕೊಳ್ಳಬಹುದಾದ ಇಂಟರ್ನ್‌ಗಳಿಗೆ ಮಂಜೂರಾತಿ ನೀಡಿದೆ. ಮಾರ್ಗದರ್ಶನಗಳನ್ನು ವಿಕಾಸಂ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲಾಗಿದೆ.

ಬಿ) ವಿಕಾಸಂ ಡೇಟಾ ಕಾರ್ಡ್ ಉಪಯೋಗದ ಬಗ್ಗೆ ಹಾಗೂ ಸಾರಿಗೆ ಬಗ್ಗೆ ಆಂತರಿಕ ನೀತಿ ರೂಪಿಸಿದ್ದು, ಇವುಗಳು ದಿನಾಂಕ 10/09/2015 ರಂದು ನಡೆದ ವಿಕಾಸಂ ಆಡಳಿತ ಪರಿಷತ್ತಿನ ಸಭೆಯಲ್ಲಿ ಅನುಮೋದನೆ ಪಡೆದಿವೆ.

**2.9 ಹಣಕಾಸು:**

ವಿತ್ತೀಯ ಕಾರ್ಯನೀತಿ ಸಂಸ್ಥೆ (ವಿಕಾಸಂ) ಹಾಗೂ ವಿತ್ತೀಯ ನೀತಿ ವಿಶ್ಲೇಷಣಾ ಕೋಶ (ವಿನೀವಿಕೋ) ಇವುಗಳಿಗೆ ಎರಡು ಲೆಕ್ಕ ಶೀರ್ಷಿಕೆಗಳಿವೆ. ವಿಕಾಸಂ ಗೆ ಯೋಜನೆ ಹಾಗೂ ಯೋಜನೇತರ ಲೆಕ್ಕ ಶೀರ್ಷಿಕೆಗಳೆರಡರಲ್ಲೂ ಅನುದಾನ ಬಿಡುಗಡೆಯಾಗಿದೆ. ವಿನೀವಿಕೋ ಕ್ಕೆ ಯೋಜನೇತರ ಶೀರ್ಷಿಕೆಯಡಿ ಮಾತ್ರ ಅನುದಾನ ಬಿಡುಗಡೆಯಾಗಿದೆ. 2014–15 ನೇ ಸಾಲಿನ ನಂತರ ವಿನೀವಿಕೋ ವಿಕಾಸಂ ಯಲ್ಲಿ ವಿಲೀನಗೊಂಡ ಕಾರಣ ಪ್ರತ್ಯೇಕವಾಗಿ ಅನುದಾನ ಬಿಡುಗಡೆಯಾಗಿರುವುದಿಲ್ಲ.

2015–16ನೇ ಸಾಲಿನಲ್ಲಿ ವಿಕಾಸಂ ಲೆಕ್ಕ ಶೀರ್ಷಿಕೆಗಳಿಗೆ ಹಂಚಿಕೆಯಾಗಿರುವ ಹಣಕಾಸು ವಿವರಗಳು ಈ ಕೆಳಕಂಡಂತಿವೆ:

(ಲಕ್ಷ ರೂ.ಗಳಲ್ಲಿ)

| **ಲೆಕ್ಕಶೀರ್ಷಿಕೆ** | **ವಾಸ್ತವಿಕ/ಲೆಕ್ಕಗಳು 2013–14** | | **ಆರ್‌ಇ 2014–15** | | **ಬಿಇ 2015–16** | |
|---|---|---|---|---|---|---|
| | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ |
| | (1) | (2) | (3) | (4) | (5) | (6) |
| ವಿತ್ತೀಯ ಕಾರ್ಯನೀತಿ ಸಂಸ್ಥೆ (2052–00–090–0–12) | 144.75 | 266.62 | 89.29 | 543.29 | 98.00 | 935.00 |
| ವಿತ್ತೀಯ ಕಾರ್ಯನೀತಿ ವಿಶ್ಲೇಷಣಾ ಕೋಶ (2054–00–0980–02) | --- | 135.71 | --- | --- | --- | --- |
| **ಒಟ್ಟು** | **144.75** | **402.33** | **89.29** | **543.29** | **98.00** | **935.00** |

**2.10 ವೆಚ್ಚ:**

ಮಾರ್ಚ್ 2016 ರವರೆಗೆ ಮಾಡಿರುವ ವೆಚ್ಚಗಳ ವಿವರ ಕೆಳಕಾಣಿಸಿದಂತಿದೆ:

(ಲಕ್ಷ ರೂ.ಗಳಲ್ಲಿ)

| **ಲೆಕ್ಕಶೀರ್ಷಿಕೆ** | **ವಾಸ್ತವಿಕ/ಲೆಕ್ಕಗಳು 2013–14** | | **ಪರಿಷ್ಕೃತ ಅಂದಾಜು 2015–16** | | **ಮಾರ್ಚ 2016 ವರೆಗಿನ ವೆಚ್ಚಗಳು** | |
|---|---|---|---|---|---|---|
| | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ |
| | (1) | (2) | (3) | (4) | (5) | (6) |
| ವಿತ್ತೀಯ ಕಾರ್ಯನೀತಿ ಸಂಸ್ಥೆ (2052–00–090–0–12) | 144.75 | 266.62 | 98.00 | 672.92 | 78.55 | 526.75 |
| ವಿತ್ತೀಯ ಕಾರ್ಯನೀತಿ ವಿಶ್ಲೇಷಣಾ ಕೋಶ (2054–00–098–0–02) | --- | 135.71 | --- | --- | --- | --- |
| **ಒಟ್ಟು** | **144.75** | **402.33** | **98.00** | **672.92** | **78.55** | **526.75** |

**ಅಧ್ಯಾಯ– 3**

**ಅನ್ವಯಿಸುವುದಿಲ್ಲ.**

## ಅಧ್ಯಾಯ–4

4.1 ಮೊದಲ ಭಾಗ : ಇಲ್ಲ

4.2 ದ್ವಿತೀಯ ಭಾಗ : ಇಲ್ಲ

**4.3 ತೃತೀಯ ಭಾಗ:** ಇಲ್ಲ

**4.4 ನಾಲ್ಕನೇ ಭಾಗ:**
**ವಿಕಾಸಂ ಯ ಅರ್ಥಶಾಸ್ತ್ರ ಮತ್ತು ಆಡಳಿತ ದ ಜರ್ನಲ್– "ಆರ್ಥಿಕ ಚರ್ಚೆ "**

ಎ. ಮಾರ್ಚ್ 2016 ರಲ್ಲಿ ವಿಕಾಸಂ ಯ ಜರ್ನಲ್ ನ ಮೊದಲ ಸಂಪುಟವನ್ನು ಪ್ರಕಟಿಸಲಾಗಿದೆ. ಈ ಜರ್ನಲ್ ಪ್ರಮುಖ ವ್ಯಕ್ತಿಗಳು ಬರೆದಿರುವ 12 ಆಲೋಚನೆ ಪ್ರಚೋದಿಸುವ ಲೇಖನಗಳನ್ನು ಒಳಗೊಂಡಿದೆ. "ಆರ್ಥಿಕ ಚರ್ಚೆ " ಯು ವಿಕಾಸಂ ಯ ಅರ್ಧವಾರ್ಷಿಕ ಜರ್ನಲ್ ಆಗಿರುತ್ತದೆ. ಸದರಿ ಜರ್ನಲ್ ಸರ್ಕಾರ ಮತ್ತು ಆಡಳಿತದ ಕುರಿತು ಹಣಕಾಸು ಮತ್ತು ವಿತ್ತೀಯ ವಿಷಯಗಳ ಬಗ್ಗೆ ಹೊಸತಾದ, ಒಳದೃಷ್ಠಿ ಹೊಂದಿದ ಪ್ರಭಾವಕಾರಿ ಲೇಖನಗಳನ್ನು ಒಳಗೊಂಡಿದ್ದು ಶೈಕ್ಷಣಿಕ, ಸರ್ಕಾರಿ, ಸರ್ಕಾರೇತರ ವ್ಯಕ್ತಿಗಳನ್ನು ಹಾಗೂ ಅಭ್ಯಾಸ ನಿರತರನ್ನು (practitioners) ಉದ್ದೇಶಿಸಿರುತ್ತದೆ.

ಬಿ. "ಆರ್ಥಿಕ ಚರ್ಚೆ " ಶೀರ್ಷಿಕೆಯನ್ನು ರಿಜಿಸ್ಟ್ರಾರ್ ಆಫ್ ನ್ಯೂಸ್ ಪೇಪರ್ಸ್ ಫಾರ್ ಇಂಡಿಯಾ, ನವದೆಹಲಿ ಕಚೇರಿಯವರು ಪರಿಶೀಲಿಸಿರುತ್ತಾರೆ. ಜರ್ನಲ್ ಗೆ RNI ಸಂಖ್ಯೆ ಪಡೆಯುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.

ಸಿ. ಅಂತರಾಷ್ಟ್ರೀಯ ಮಾನಕ ಕ್ರಮ ಸಂಖ್ಯೆ (The International Standard Serial Number) (ISSN) ಯನ್ನು Indian National Centre for ISSN, ನವದೆಹಲಿ ಯಿಂದ ಪಡೆಯಲಾಗಿದೆ.

### ಅಧ್ಯಾಯ–5

**5 ಆಡಳಿತಾತ್ಮಕ ಚಟುವಟಿಕೆಗಳು ಮತ್ತು ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿನ ಸಾಧನೆಗಳು**

**5.1. ಮಾನವ ಸಂಪನ್ಮೂಲ.**

ಎ) ಸಿಬ್ಬಂದಿ ಬಲ ಮತ್ತು ಖಾಲಿ ಹುದ್ದೆಗಳನ್ನು ತೋರಿಸುವ ತ:ಖ್ತೆ

| ಹುದ್ದೆಗಳು | ವೃಂದ | ಮಂಜೂರಾದ ಹುದ್ದೆಗಳು | ಕಾರ್ಯಬಲ | ಖಾಲಿ |
|---|---|---|---|---|
| ವಿತ್ತೀಯ ಕಾರ್ಯನೀತಿ ಸಂಸ್ಥೆ | | | | |
| ನಿರ್ದೇಶಕರು | ಎ | 1 | I/C | 1 |
| ಜಂಟಿ ನಿರ್ದೇಶಕರು | ಎ | 1 | 1 | 0 |
| ಭೋದಕರು | ಎ | 15 | 3 | 12 |
| ಮುಖ್ಯ ಲೆಕ್ಕಾಧಿಕಾರಿಗಳು | ಎ | 1 | 1 | 0 |
| ವಿಶೇಷಾಧಿಕಾರಿ | ವೇತನ ಶ್ರೇಣಿ ರಹಿತ | 18* | 14 | 4 |
| ಲೆಕ್ಕ ಪತ್ರ ಅಧೀಕ್ಷಕರು | ಬಿ | 1 | 1 | 0 |
| ಗ್ರಂಥಪಾಲಕರು | ಸಿ | 1 | OOD | 1 |
| ಸಹಾಯಕ ಗ್ರಂಥಪಾಲಕರು | ಸಿ | 1 | 0 | 1 |
| ಸಹಾಯಕ ಸಾಂಖ್ಯಿಕ ಅಧಿಕಾರಿ | ಸಿ | 2 | 0 | 2 |
| ಪ್ರೋಗ್ರ್ಯಾಮರ್ | ಸಿ | 2 | 0 | 2 |
| ದತ್ತಾಂಶ ನಮೂದುಗಾರರು | ಸಿ | 2 | 0 | 2 |
| ಪ್ರಥಮ ದರ್ಜೆ ಲೆಕ್ಕ ಸಹಾಯಕ | ಸಿ | 1 | 1 | 0 |
| ಪ್ರಥಮ ದರ್ಜೆ ಸಹಾಯಕರು | ಸಿ | 1 | 0 | 1 |
| ಸ್ಟೆನೋ ಗ್ರಾಫರ್ | ಸಿ | 8 | 0 | 8 |
| ದ್ವಿತೀಯ ದರ್ಜೆ ಲೆಕ್ಕ ಸಹಾಯಕರು | ಸಿ | 1 | 1 | 0 |
| ದ್ವಿತಿಯ ದರ್ಜೆ ಸಹಾಯಕರು | ಸಿ | 1 | 1 | 0 |
| ದಲಾಯತ್ | ಡಿ | 12 | 0 | 12 |
| ಒಟ್ಟು | | 69 | 23 | 46 |

- 5 ವಿಶೇಷಾಧಿಕಾರಿ ಹುದ್ದೆಗಳನ್ನು ಸಂಶೋಧನಾ ಸಲಹೆಗಾರರ ಹುದ್ದೆಗಳನ್ನಾಗಿ ಪರಿವರ್ತಿಸಿದ್ದು, ವರದಿ ಮಾಡಿದ ಸಾಲಿನಲ್ಲಿ 4 ಸಂಶೋಧನಾ ಸಲಹೆಗಾರರು ಕಾರ್ಯನಿರ್ವಹಿಸುತ್ತಿರುತ್ತಾರೆ.

**ಬಿ) ವೃಂದಾವಾರು ಸಿಬ್ಬಂದಿ ಬಲ ಮತ್ತು ಖಾಲಿ ಹುದ್ದೆಗಳನ್ನು ತೋರಿಸುವ ತ:ಖ್ತೆ**

| ಕ್ರ. ಸಂ. | ವೃಂದ | ಮಂಜೂರಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು | ಕಾರ್ಯಬಲ | | |
|---|---|---|---|---|---|---|
| | | | | ಪುರುಷ | ಮಹಿಳೆ | ಒಟ್ಟು |
| 1 | ಎ | 18 | 13 | 2 | 3 | 5 |
| 2 | ಬಿ | 1 | - | 1 | - | 1 |
| 3 | ಸಿ | 20 | 17 | 2 | 1 | 3 |
| 4 | ಡಿ | 12 | 12 | - | - | - |
| 5 | ವೇತನ ಶ್ರೇಣಿ ರಹಿತ | 18 | 4 | 7 | 7 | 14 |
| | **ಒಟ್ಟು** | 69 | 46 | 12 | 11 | 23 |

**ಸಿ) ಪುರುಷ, ಮಹಿಳಾ, ಮತ್ತು ಪ.ಜಾ/ಪ.ಪಂ ದ ಸಂಖ್ಯಾಬಲ ತೋರಿಸುವ ತ:ಖ್ತೆ**

| ಕ್ರ. ಸಂ | ವೃಂದ | ಪುರುಷ | | | ಮಹಿಳೆ | | | ಒಟ್ಟು |
|---|---|---|---|---|---|---|---|---|
| | | ಪ.ಜಾ | ಪ. ಪಂ | ಇತರೆ | ಪ.ಜಾ | ಪ. ಪಂ | ಇತರೆ | |
| 1 | ಎ | - | - | 2 | - | - | 3 | 5 |
| 2 | ಬಿ | - | - | 1 | - | - | - | 1 |
| 3 | ಸಿ | 1 | | 1 | | | 1 | 3 |
| 4 | ಡಿ | - | | | | | - | - |
| 5 | ವೇತನ ಶ್ರೇಣಿ ರಹಿತ | 2 | 1 | 4 | -- | -- | 7 | 14 |
| | ಒಟ್ಟು | 3 | 1 | 8 | - | - | 11 | 23 |

**5.2 ಖಾಲಿ ಹುದ್ದೆಗಳು ಮತ್ತು ನಿವೃತ್ತಿಗಳು:**

ವಿಕಾಸಂನಲ್ಲಿ 46 ಹುದ್ದೆಗಳು ಖಾಲಿ ಇವೆ. 2016–17 ನೇ ಸಾಲಿನಲ್ಲಿ ನಿವೃತ್ತಿ ಹೊಂದಲಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ಇರುವುದಿಲ್ಲ.

**5.3 ಹೊರಗುತ್ತಿಗೆ ಸಿಬ್ಬಂದಿ:**

ಕೆಳಕಾಣಿಸಿದ ಸಿಬ್ಬಂದಿಯನ್ನು ಹೊರಗುತ್ತಿಗೆ /ಒಪ್ಪಂದದ ಆಧಾರದ ಮೇಲೆ ನೇಮಿಸಲಾಗಿದೆ.

| ಕ್ರ. ಸಂ | ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ |
|---|---|---|
| 1 | ಸಮಾಲೋಚಕರು | 2 |
| 2 | ಸಿಸ್ಟಂ ಅಡ್ಮಿನಿಸ್ಟ್ರೇಟರ್ | 1 |
| 2 | ಆಪ್ತ ಸಹಾಯಕರು | 8 |
| 3 | ದತ್ತಾಂಶ ನಮೂದುಗಾರು | 12 |
| 4 | ವಾಹನ ಚಾಲಕರು | 5 |
| 5 | ತಾಂತಿಕ ಸಹಾಯಕರು | 1 |
| 6 | ಸ್ವಾಗತಕಾರರು | 3 |
| 7 | ದಲಾಯತ್ | 6 |

**5.4 ತರಬೇತಿ ಹಾಗೂ ವಿಕಾಸಂ ಪ್ರತಿನಿಧಿಸುವಿಕೆ:**

ಎ) ಅಧಿಕಾರಿ/ಸಿಬ್ಬಂದಿಗಳು ಭಾಗವಹಿಸಿದ ತರಬೇತಿಗಳು:

1. ಒಬ್ಬ ಅಧಿಕಾರಿಯು ದಿನಾಂಕ 8 ರಿಂದ 10 ಜುಲೈ 2015 ರವರೆಗೆ ವಿಕಾಸಂ ನಲ್ಲಿ ನಡೆದ ಯೋಜನಾ ನಿರ್ವಹಣೆ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
2. ಒಬ್ಬ ಅಧಿಕಾರಿಯು ದಿನಾಂಕ 22 ರಿಂದ 24 ಜುಲೈ 2015 ರವರೆಗೆ NATRSS, ನವದೆಹಲಿ ಇಲ್ಲಿ ನಡೆದ Mentoring Skills ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
3. ಒಬ್ಬ ಅಧಿಕಾರಿಯು ದಿನಾಂಕ 27 ರಿಂದ 29 ಜುಲೈ 2015 ರವರೆಗೆ NATRSS, ನವದೆಹಲಿ ಇಲ್ಲಿ ನಡೆದ Facilitation Skills ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
4. ಇಬ್ಬರು ವಿಶೇಷಾಧಿಕಾರಿಗಳು ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇಲ್ಲಿ ದಿನಾಂಕ 07/09/2015 ರಿಂದ 11/09/2015 ರವರೆಗೆ ನಡೆದ "Experience Learning Tools" (ELT) ತರಬೇತಿ ಪಡೆದಿರುತ್ತಾರೆ.
5. ಡಾ.ಜೊಹಾನಿಸ್ ಕೈಸರ್, ಮಾಹಿತಿ ತಂತ್ರಜ್ಞಾನ ಅಧಿಕಾರಿ, UNFAO, ರೋಮ್ ಮತ್ತು ಸ್ಟ್ರಾಟೆಜಿಕ್ ಲೀಡ್, ಗೋಡಾನ್ ರವರು 'Global Open Data in Agriculture and Nutrition, a new frontier for achieving food security' ವಿಷಯದ ಬಗ್ಗೆ ದಿನಾಂಕ 07/10/2015 ರಂದು Indian Statistical Institute, Bangalore campus ನಲ್ಲಿ ನೀಡಿದ ಉಪನ್ಯಾಸ ಕಾರ್ಯಕ್ರಮದಲ್ಲಿ ಒಬ್ಬ ಅಧಿಕಾರಿಗಳು ಭಾಗವಹಿಸಿದ್ದರು.
6. ಒಬ್ಬ ವಿಶೇಷಾಧಿಕಾರಿಯು RCVP Noronha Academy of Administration, ಭೂಪಾಲ್ ನಲ್ಲಿ ದಿನಾಂಕ 19/10/2015 ರಿಂದ 21/10/2015 ರವರೆಗೆ ನಡೆದ "Facilitation Skill Course" ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
7. ಒಬ್ಬ ಅಧಿಕಾರಿಯು ತಿರುವನಂತಪುರದಲ್ಲಿ ದಿನಾಂಕ 21 ಮತ್ತು 22 ಸೆಪ್ಟೆಂಬರ್ 2015 ರಂದು ನಡೆದ Trainers' Training on GST ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
8. ಒಬ್ಬ ಸಿ ಗುಂಪಿನ ಸಿಬ್ಬಂದಿಯು ಬೆಂಗಳೂರು ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ ದಿನಾಂಕ 16/11/2015 ರಿಂದ 18/11/2015 ರವರೆಗೆ ನಡೆದ "Preparation of bills" ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
9. ಒಬ್ಬ ಸಿ ಗುಂಪಿನ ಸಿಬ್ಬಂದಿಯು ಬೆಂಗಳೂರು ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ ದಿನಾಂಕ 14/12/2015 ರಿಂದ 15/12/2015 ರವರೆಗೆ ನಡೆದ "NPS" ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
10. ಒಬ್ಬ ಅಧಿಕಾರಿಯು ದಿನಾಂಕ 4 ರಿಂದ 8 ಜನವರಿ 2016 ರವರೆಗೆ ವಿಕಾಸಂ ನಲ್ಲಿ ನಡೆದ Public Private Partnership (PPP) ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
11. ಒಬ್ಬ ಸಿ ಗುಂಪಿನ ಸಿಬ್ಬಂದಿಯು ಬೆಂಗಳೂರು ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ ದಿನಾಂಕ 4/02/2016 ರಿಂದ 06/02/2016 ರವರೆಗೆ ನಡೆದ "ಪಂಚತಂತ್ರ" ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
12. ಒಬ್ಬ ಅಧಿಕಾರಿಯು ದಿನಾಂಕ 15 ರಿಂದ 20 ಫೆಬ್ರವರಿ 2016 ರವರೆಗೆ ಕಿಯೋನಿಕ್ಸ್‌ನಲ್ಲಿ ನಡೆದ Computer

Literacy Training (CLT) ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

13. ಒಬ್ಬ ಬಿ ಗುಂಪಿನ ಅಧಿಕಾರಿಯು ಬೆಂಗಳೂರು ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ ದಿನಾಂಕ 08/03/2016 ರಿಂದ 10/03/2016 ರವರೆಗೆ ನಡೆದ "ಪಂಚತಂತ್ರ" ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬಿ) ಅಧಿಕಾರಿಯು ನೀಡಿದ ರಾಜ್ಯದೊಳಗಿನ ಮತ್ತು ಹೊರಗಿನ ತರಬೇತಿಗಳು:

i) ಒಬ್ಬ ಅಧಿಕಾರಿಯು 'Monetary Unit Sampling – Introduction, calculation of sample size, and extrapolation of results.' ವಿಷಯದ ಬಗ್ಗೆ ದಿನಾಂಕ 16/10/2015 ರಂದು ಮಹಾಲೇಖಾಪಾಲರ ಕಚೇರಿಯಲ್ಲಿ ನಡೆದ Southern Regional Workshop on Application of Statistical Sampling in Audit organized for the Audit officers of the southern states ನಲ್ಲಿ ಉಪನ್ಯಾಸ ನೀಡಿರುತ್ತಾರೆ.

ii) ಒಬ್ಬ ಅಧಿಕಾರಿಯು 'ಲಿಂಗಾಧಾರಿತ ಆಯವ್ಯಯ' ಹಾಗೂ ಲಿಂಗಾಧಾರಿತ ಸಿದ್ಧಾಂತಗಳ ಬಗ್ಗೆ ಆತಸಂ, ಮೈಸೂರು ಇಲ್ಲಿ ಉಪನ್ಯಾಸ ನೀಡಿರುತ್ತಾರೆ.

iii) ಒಬ್ಬ ಅಧಿಕಾರಿಯು 'ಲಿಂಗಾಧಾರಿತ ಆಯವ್ಯಯ' ಬಗ್ಗೆ ವಿವಿಧ ಆಡಳಿತ ತರಬೇತಿ ಸಂಸ್ಥೆಗಳಲ್ಲಿ ಉಪನ್ಯಾಸ ನೀಡಿರುತ್ತಾರೆ.

ಸಿ) ವಿವಿಧ ವೇದಿಕೆಗಳಲ್ಲಿ ವಿಕಾಸಂ ಪ್ರತಿನಿಧಿಸುವಿಕೆ:

* ಅಕ್ಟೋಬರ್ 2015 ರಲ್ಲಿ ನವದೆಹಲಿಯಲ್ಲಿ ನಡೆದ ರಾಜ್ಯ ಸಚಿವರು ಹಾಗೂ ಪ್ರಧಾನ ಕಾರ್ಯದರ್ಶಿಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ವಿಕಾಸಂ ಭಾಗವಹಿಸಿರುತ್ತದೆ.

* ನವಂಬರ್ 2015 ರಲ್ಲಿ ಯುಎನ್ ವುಮೆನ್ ಸಂಸ್ಥೆಯು ಥೈಲ್ಯಾಂಡ್ ನ ಬ್ಯಾಂಕಾಕ್ ನಲ್ಲಿ ಏರ್ಪಡಿಸಿದ "Asia Pacific regional consultation on shaping a new agenda for transformative financial and gender equality- a dialogue with Ministers of Finance" ಕಾರ್ಯಕ್ರಮ ಮತ್ತು Status of GRB in the Asia Pacific region- validation ಕಾರ್ಯಾಗಾರದಲ್ಲಿ ವಿಕಾಸಂ ನ ಪ್ರತಿನಿಧಿಯು ಭಾಗವಹಿಸಿದ್ದರು.

**5.5 ಹೆಚ್ಚಿನ ವಿದ್ಯಾರ್ಹತೆ ಪಡೆದಿರುವ ಬಗ್ಗೆ:**

ಶ್ರೀ ಮಾಝುದ್ದೀನ್ ಖಾನ್, ವಿಶೇಷಾಧಿಕಾರಿ ಇವರು "Impact of E-Governance on Administration" with special reference to Government of Karnataka and its Employees ವಿಷಯದ ಬಗ್ಗೆ ಪಿಹೆಚ್‌ಡಿಗಾಗಿ ವಿಟಿಯು ವಿಶ್ವವಿದ್ಯಾಲಯದಲ್ಲಿ ಥೀಸಿಸ್ ಸಲ್ಲಿಸಿರುತ್ತಾರೆ.

**5.6 ತಂತ್ರಾಂಶ:**

2015-16 ನೇ ಸಾಲಿನಲ್ಲಿ ನಡೆಸಲಾದ ತರಬೇತಿ ಕಾರ್ಯಕ್ರಮಗಳ ವಿವರಗಳನ್ನು ತರಬೇತಿ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಿದ್ದು ಪ್ರಶಿಕ್ಷಣಾರ್ಥಿಗಳಿಂದ ಕೋರ್ಸ್‌ಗಳ ಬಗ್ಗೆ, ಆಹಾರ ಮತ್ತು ವಸತಿ ಸೌಲಭ್ಯದ ಕುರಿತು ಆನ್‌ಲೈನ್ ಫೀಡ್ ಬ್ಯಾಕ್ ಪಡೆಯಲು ಉಪಯೋಗಿಸಲಾಗುತ್ತಿದೆ.

**5.7 ಆಡಳಿತ ತಪಾಸಣೆ:**

ಅನ್ವಯಿಸುವುದಿಲ್ಲ.

## ಅಧ್ಯಾಯ-6

**6.1 ವಿಧಾನ ಸಭೆ/ ವಿಧಾನ ಪರಿಷತ್ತು ಪ್ರಶ್ನೆಗಳು:**

ವಿತ್ತೀಯ ಕಾರ್ಯನೀತಿ ಸಂಸ್ಥೆಯು ವರದಿಯ ಸಾಲಿನಲ್ಲಿ 3 ಲೋಕ ಸಭೆ, 32 ವಿಧಾನ ಸಭೆ ಮತ್ತು 26 ವಿಧಾನ ಪರಿಷತ್ತಿನ ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಲಾಗಿದೆ. ದಿನಾಂಕ 04/03/2016 ರಂದು ಉತ್ತರಿಸಬೇಕಾಗಿದ್ದ ಲೋಕಸಭಾ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ Dy No. 7139 ಲಿಂಗಾಧಾರಿತ ಆಯವ್ಯಯ ಮತ್ತು ದಿನಾಂಕ 04/03/2016 ರಂದು ಉತ್ತರಿಸಬೇಕಾಗಿದ್ದ ಲೋಕಸಭಾ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ Dy No. 6671 ಲಿಂಗಾಧಾರಿತ ಬಜೆಟ್ ಕುರಿತಾದ್ದಾಗಿದ್ದು ಮಾಹಿತಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಕಳುಹಿಸಲಾಗಿದೆ.

**6.2 ಮೊಕದ್ದಮೆಗಳು:**

ಇಲ್ಲ.

**6.3 ಲೆಕ್ಕ ಪರಿಶೋಧನೆ:**

ಪ್ರಸ್ತುತ ಕೆಳಕಾಣಿಸಿದಂತೆ ಆಡಿಟ್ ಪ್ಯಾರಾಗಳು ಬಾಕಿ ಉಳಿದಿವೆ.

| ವರ್ಷ | ಪ್ಯಾರಾಗಳ ಸಂಖ್ಯೆ |
|---|---|
| 2009–11 | 2 |
| 2011–12 | 5 |
| 2012–13 | 7 |
| 2013–14 | 12 |
| **ಒಟ್ಟು** | **26** |

Prachi Pandey
4/5/16

ನಿರ್ದೇಶಕರು
ವಿತ್ತೀಯ ಕಾರ್ಯನೀತಿ ಸಂಸ್ಥೆ
ಬೆಂಗಳೂರು



20
ವಾರ್ಷಿಕ ವರದಿ 2015–16